ಉಪನ್ಯಾಸ ಗ್ರಂಥಮಾಲೆ

೩೫೬

ವಚನಕಾರ ಮಡಿವಾಳ ಮಾಚಿದೇವರು

ಎಸ್. ಕೆ. ಕೊಪ್ಪಾ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ನವಂಬರ, ೧೯೮೬

ಉಪನ್ಯಾಸ ಗ್ರಂಥಮಾಲೆ

೩೫೭

ವಚನಕಾರ

ಮಡಿವಾಳ ಮಾಚಿದೇವರು

ಎಸ್. ಕೆ. ಕೊಪ್ಪಾ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಕಾಶಕರು:

ಎಸ್. ಬಿ. ನಾಯಕ

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ೫೦೦೦ ಪ್ರತಿಗಳು

ನವಂಬರ, ೧೯೬೭

ಬೆಲೆ: ೫೦ ಪೈಸೆ

ಮುದ್ರಕರು:

ಜಿ. ಬಿ. ಮನ್ನಾಚಾರ

ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೫೫ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿ

ಅರಿಕೆ

ನಾನು ದಿನಾಂಕ ೨೫-೨-೧೯೮೨ ರಂದು ಸಿಂದಗಿ ತಾಲ್ಲೂಕಿನ ದೇವರಹಿಪ್ಪರಗಿ ಗ್ರಾಮದಲ್ಲಿ ನಡೆಸಿದ ಕರ್ನಾಟಕ ವಿಶ್ವವಿದ್ಯಾಲಯದ ೩೧೧ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಡಿಯಲ್ಲಿ 'ಮಡಿವಾಳ ಮಾಚಿದೇವರು' ವಿಷಯ ಕುರಿತು ಮಾಡಿದ ಉಪನ್ಯಾಸದ ವಿಸ್ತೃತರೂಪ ಈ ಪುಸ್ತಿಕೆ.

೧೨ನೇ ಶತಮಾನದ ಶರಣ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ ಮಾಚಿದೇವರ ಮಹಿಮೆಯನ್ನು ವೀರಶೈವ ಕವಿಗಳೂ ಸಮಕಾಲೀನ ಶರಣರೂ ಕೊಂಡಾಡಿದ್ದಾರೆ. ಆದರೆ ಇಂದು ಪ್ರಮುಖ ವಚನಕಾರರ ಮರೆಯಲ್ಲಿ ಮರೆಮಾಚಿದ ಮಾಚಿದೇವನನ್ನು ಕುರಿತು ನಡೆದ ಕೆಲಸ ಸ್ವಲ್ಪ ಮಾತ್ರ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡ ಅವನ ಬಹುಮುಖ ವ್ಯಕ್ತಿತ್ವವನ್ನು ಸೆರೆಹಿಡಿಯುವ ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ.

ಈ ಉಪನ್ಯಾಸಕ್ಕೆ ಅವಕಾಶವನ್ನೊದಗಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಅಂದಿನ ನಿರ್ದೇಶಕ ಶ್ರೀ ಚೆನ್ನವೀರ ಕಣವಿ ಅವರಿಗೂ, ಅದನ್ನು ಪುಸ್ತಿಕೆ ರೂಪದಲ್ಲಿ ಪ್ರಕಟಮಾಡುತ್ತಿರುವ ಇಂದಿನ ನಿರ್ದೇಶಕ ಶ್ರೀ ಎಸ್.ಬಿ. ನಾಯಕ ಅವರಿಗೂ ಉಪನ್ಯಾಸ ಶಿಬಿರದಲ್ಲಿ ನಮ್ಮೊಂದಿಗೆ ಸಹಕರಿಸಿದ ಸಹಾಯಕ ನಿರ್ದೇಶಕ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ

'ಶಬ್ಧಮುಗ್ಧ'ವಾಗಿ ಕುಳಿತು ಕೇಳಿದ ಹಿಪ್ಪರಿಗೆ ಗ್ರಾಮದ ಜನತೆಗೂ ಹಾಗೂ ಅಲ್ಲಿನ ಸಂಚಾಲಕರಿಗೂ ನಾನು ಉಪಕೃತನಾಗಿದ್ದೇನೆ.

ಇದನ್ನು ಬರೆಯುವಲ್ಲಿ ನನಗೆ ಮಾರ್ಗದರ್ಶಕರಾದ ಡಾ. ಗುರುಲಿಂಗ ಕಾಪಸೆ ಅವರಿಗೂ, ಉಪಯುಕ್ತ ಸಲಹೆಗಳನ್ನು ನೀಡಿ ನನ್ನ ಹಿತಚಿಂತನೆ ಬಯಸುತ್ತಿರುವ ಗುರುಗಳಾದ ಡಾ. ಎಂ. ಎಂ. ಕಲ್ಬುರ್ಗಿ ಹಾಗೂ ಪ್ರೊ. ಎಸ್. ಜಿ. ಕರೂರ ಅವರಿಗೂ ಪ್ರೋತ್ಸಾಹಿಸುತ್ತಿರುವ, ಚಿಕ್ಕಮ್ಮ ಶಕುಂತಲಾ ಕಿರಗಿ ಮತ್ತು ಗೆಳೆಯರಾದ ಎಸ್. ಬಿ. ಹಿರೇಮಠ, ಎಸ್. ಆರ್. ಲೋಣಿ, ಸಿ. ಜೆ. ಗಿರಿಗೌಡರ, ಎನ್. ಬಿ. ಪಾಟೀಲ, ಎ. ಸಿ. ಮಂಗಳೂರೆ ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಎಸ್. ಕೆ. ಕೊಪ್ಪಾ

ಪರಿವಿಡಿ

೧. ಪೀಠಿಕೆ

ಹನ್ನೆರಡನೆಯ ಶತಮಾನದಲ್ಲಿ ಮಹಾಪೂರದಂತೆ ಉಕ್ಕಿ ಬಂದ ಶಿವಶರಣರ ಆಂದೋಲನಕ್ಕೆ ವಿಜಾಪೂರ ಜಿಲ್ಲೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ. ಬಸವ ಮತ್ತು ಅವನ ಹಿರಿಯ ಸಮಕಾಲೀನರಾದ ಕೊಂಡಗೂಳಿ ಕೇಶಿರಾಜ, ಕಂದಶಿಲೆ ಶಂಕರ ದಾಸಿಮಯ್ಯ ಸಮಕಾಲೀನರಾದ ಹರಳಯ್ಯ, ಹಾವಿನಾಳ ಕಲ್ಲಯ್ಯ. ಮಡಿವಾಳ ಮಾಚಿದೇವ ಇದೇ ಜಿಲ್ಲೆಗೆ ಸಂಬಂಧ ಪಟ್ಟವರು.

ಕಲ್ಯಾಣದ ಶರಣರ ಸಂಘಟನೆಗೆ ಶರಣರ ಲೋಕೋದ್ಧಾರ ಚಿಂತನೆಯಷ್ಟೇ ಅಂದಿನ ಪರಿಸ್ಥಿತಿಯೂ ಕಾರಣವಾಗಿತ್ತು. ಆ ಕಾಲಕ್ಕೆ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟ ಕರಹಾಡ ೪೦೦೦ದ ಅಧಿಕಾರ ವಹಿಸಿದ ಕಲಚುರಿಗಳ ಅಧ್ಯಾಯ ದುರ್ಬಲನಾದ ಚಾಲುಕ್ಯ ಮೂರನೆಯ ತೈಲನನ್ನು ಕೊಂದು ಬಿಜ್ಜಳ ಚಕ್ರವರ್ತಿಯಾಗುವುದರ ಮೂಲಕ ರಾಜಕೀಯ ವಿಷಮತೆಗೆ ಹಾದಿಮಾಡಿಕೊಟ್ಟಿದ್ದಿತ್ತು. ಇದರೊಂದಿಗೆ ಅಂದಿನ ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯೂ ಹದಗೆಟ್ಟಿತ್ತು. ಬಹುಧರ್ಮಕ್ಕೆ ಆಡುಂಬೋಲವಾದ ಕರ್ನಾಟಕದ ಮತಪಂಥಗಳು ಕುಲಗೆಟ್ಟು ಹೋಗಿದ್ದವು. ಶೈವ ಪಂಥಗಳು ಹಲವಾರು ತಾಂತ್ರಿಕ ಆಚರಣೆಗಳಿಂದ ಮತಿಗೆಟ್ಟು ಭಕ್ತಿಪಥಕ್ಕೆ ಸಲ್ಲದಂತಾಗಿದ್ದವು. ಕರ್ಮಜಡವಾಗಿದ್ದ ವೈದಿಕ ಧರ್ಮ ಅನೇಕ ಯಜ್ಞ–

ಯಾಗಾದಿಗಳ ಹೆಸರಿನಲ್ಲಿ ಹಿಂಸೆಗೆ ತೊಡಗಿತ್ತು. ಅತಿಕಠಿಣ ವ್ರತನಿಯಮಗಳನ್ನು ಹೊಂದಿದ ಜೈನಧರ್ಮ ಸಾಮಾನ್ಯನನ್ನು ತತ್ತರಿಸುವಂತೆ ಮಾಡಿತ್ತು. ಸಾಮಾನ್ಯರಲ್ಲಿ ಕುರುಡು ಆಚರಣೆ ಅಜ್ಞಾನಗಳು ತುಂಬಿಕೊಂಡಿದ್ದವು. ಅಂದಿನ ಸಮಾಜ. ಮನುಷ್ಯ ನಿರ್ಮಿತ ಮೇಲು–ಕೀಳು ಭಾವನೆಯನ್ನು ದೇವ ನಿರ್ಮಿತಗೇರಿಸಿ ಹುಟ್ಟಿನಿಂದಲೇ ವ್ಯಕ್ತಿಯ ಯೋಗ್ಯತೆಯನ್ನಳೆ ಯುವ ಅವೈಜ್ಞಾನಿಕ ತಾರತಮ್ಯದಿಂದಾಗಿ ಶೋಷಣೆಗೆ ಇಂಬು ಗೊಟ್ಟಿತ್ತು. ಸ್ತ್ರೀಯರು ಗಂಡಿಗಿಂತ ಕೀಳು ಎಂಬ ಭಾವನೆ ಸಾರ್ವತ್ರಿಕವಾಗಿತ್ತು. ಅಂದಿನ ಸಾಹಿತ್ಯ ಕೂಡ ಕೇವಲ ಅರಮನೆ–ಗುರುಮನೆಗಳಿಗೆ ಸೀಮಿತವಾಗಿ ಜನಸಾಮಾನ್ಯರ ಆಶೋತ್ತರಗಳನ್ನು ಕಡೆಗಣಿಸಿತ್ತು. ಇಂತಹ ಪರಿಸ್ಥಿತಿಯಲ್ಲಿ ಮರ್ತ್ಯದ ಮನದ ಮೈಲಿಗೆ ತೊಳೆಯಲು ಹುಟ್ಟಿಬಂದರು ನೂರಾರು ಜನ ಶರಣರು.

ಅವರ ಕಾಲಕ್ಕೆ ಹೊಸ ಸಮಾಜದ ಸಂಘಟನೆಯಾಯಿತು. ವೈಯಕ್ತಿಕ ಸಾಧನೆ ಸಾಮಾಜಿಕ ಬದಲಾವಣೆ ಇವೆರಡೂ ಅವರ ಹೋರಾಟದ ಎರಡು ಮುಖಗಳಾದವು. ವೈಯಕ್ತಿಕ ಸಾಧನೆಯ ಅಂಗವಾಗಿ ಅವರು ನಿರ್ದಾಕ್ಷಿಣ್ಯವಾಗಿ ಸ್ವವಿಮರ್ಶೆಗೆ ತೊಡಗಿ ದರು. ನಡೆದಂತೆ ನುಡಿಯಬೇಕು, ನುಡಿದಂತೆ ನಡೆಯಬೇಕು ಎನ್ನುವುದು ಶರಣ ಧೋರಣೆಯಾಗಿತ್ತು. ಆಚರಣೆಗೆ ತರ ಲಾಗದ ಮಾತು ಎಷ್ಟೇ ಪ್ರಮುಖವಾಗಿದ್ದರೂ ಅದರಿಂದ ಯಾವ ಪ್ರಯೋಜನವಿಲ್ಲವೆಂಬುದನ್ನು ಅವರು ಅರಿತಿದ್ದರು. ಅಂತೆಯೇ ನುಡಿದಂತೆ ನಡೆದರೆ ಇದೆ ಜನ್ಮಕಡೆ ಎಂದರು.

ಇಲ್ಲಿ–ಅಲ್ಲಿ ಸಲ್ಲುವ ಬಗೆಯುನ್ನವರು ತಿಳಿದದ್ದರಿಂದ ಲೌಕಿಕ ಮತ್ತು ಅಧ್ಯಾತ್ಮಿಕ ಜೀವನದಲ್ಲಿ ಭಿನ್ನತೆಯನ್ನು ಕಲ್ಪಿಸಲಿಲ್ಲ. ಶರಣರಿಗೆ ಮರ್ತ್ಯವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಮನುಷ್ಯ ತನುಮನ ಕಲ್ಮಷಗಳನ್ನೆಲ್ಲ ತೊಳೆದುಕೊಂಡು ಶುದ್ಧನಾಗಬೇಕು. ಆಗ ಸಮಾಜದ ಅಲ್ಲಸಲ್ಲದ್ದನ್ನು ಟೀಕಿಸಿ ತಿದ್ದುವ ಅರ್ಹತೆ ಪಡೆಯಬಲ್ಲ ಎಂಬುದು ಅವರು ಕಂಡ ಸತ್ಯವಾಗಿತ್ತು.

ಶರಣರ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯ ಸ್ಥಾನಮಾನಗಳು ಅವನ ಹುಟ್ಟಿನಿಂದಲ್ಲ, ಅವನ ಚಾರಿತ್ರದಿಂದ, ಬದುಕುವ ರೀತಿ ನೀತಿಯಿಂದ ನಿರ್ಣಯವಾಗುತ್ತಿತ್ತು. ಹೆಣ್ಣು ಪ್ರತ್ಯಕ್ಷ ಪರಮಾತ್ಮನೆಂದು ಸಾರಿ ಆಕೆಗೆ ಎಲ್ಲಿಂದದ ಸ್ವಾತಂತ್ರ್ಯವನ್ನು ಕೊಟ್ಟರು. ಶರಣಧರ್ಮದಲ್ಲಿ ಎಲ್ಲರೂ ಸಮಾನಸ್ಥಾನ ಪಡೆದಿದ್ದರು.

ಸೆಟ್ಟಿಯೆಂಬೆನೆ ಸಿರಿಯಾಳನ
ಮಡಿವಾಳನೆಂಬೆನೆ ಮಾಚಯ್ಯನ
ಡೋಹಾರನೆಂಬೆನೆ ಕಕ್ಕಯ್ಯನ
ಮಾದಾರನೆಂಬೆನೆ ಚೆನ್ನಯ್ಯನ
ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ.

ಎಂದರು ಬಸವಣ್ಣನವರು. ಶರಣರು ಸಮಾಜವನ್ನು ವಿಡಂಬಿಸಿ, ಟೀಕಿಸಿ, ಪ್ರತಿಭಟಿಸಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಹೊಸ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು. ಮೇಲು–ಕೀಳು, ಬಡವ–ಬಲ್ಲಿದ ಹೆಣ್ಣು–ಗಂಡುಗಳೆಂಬ ಅಸಮಾನತೆಯನ್ನು ಹೋಗಲಾಡಿಸಿ "ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು" ಬದುಕನ್ನು ನೆಲೆಗೊಳಿಸಲು ಪ್ರಯತ್ನಿಸಿದರು.

ಕೊಲುವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ಎಂಬ ಅಣ್ಣನ ಮಾತು ವರ್ಣಾಶ್ರಮ ಧರ್ಮಕ್ಕೆ ಕೊಡಲಿ ಏಟು ಹಾಕಿತು, ಅನೂಚಾನವಾಗಿ ನಡೆದುಬಂದ ಸಂಪ್ರದಾಯವನ್ನು ವಿರೋಧಿಸಿ ಹೊಸ ಮಾರ್ಗದಲ್ಲಿ ನಡೆಯುವ ಶರಣಮಾರ್ಗ ಸುಲಭ ಸಾಧ್ಯವಾದುದೇನೂ ಆಗಿರಲಿಲ್ಲ. ಅದನ್ನರಿತ ಚೆನ್ನ ಬಸವಣ್ಣ "ಬಟ್ಟಬಯಲೆಲ್ಲ ಗಟ್ಟಿಗೊಂಡಡೆ ಸ್ವರ್ಗಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಹದೊ ? ಮೇಘಜಲವೆಲ್ಲ ಮುತ್ತಾದೊಡೆ ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಹದೊ ? ಕಷ್ಟಜೀವಿ ಮನುಜರೆಲ್ಲಾ ನೆಟ್ಟನೆ ಶಿವಜ್ಞಾನಿಗಳಾದೊಡೆ ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಹದೊ ? – ಇಂತೆಂದುದಾಗಿ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ" ಎಂದಿದ್ದಾನೆ. ಇಂತಹ ಕೋಟಿಗೊಬ್ಬ ಶರಣರಲ್ಲಿ ಒಬ್ಬ ಮಡಿವಾಳ ಮಾಚಿದೇವ.

೨. ಜೀವನ ವೃತ್ತಾಂತ

೧. ಕಾಲ :

ಜೀವನ ಚರಿತ್ರೆಯಲ್ಲಿ ಎದುರಾಗುವ ಪ್ರಮುಖ ಸಮಸ್ಯೆ ಆ ವ್ಯಕ್ತಿ ಬದುಕಿದ ಕಾಲನಿರ್ಣಯ. ಕಲ್ಯಾಣ ಶಿವಶರಣರಲ್ಲಿ ಉಜ್ವಲ ವ್ಯಕ್ತಿತ್ವವನ್ನು ಪಡೆದ ಮಡಿವಾಳ ಮಾಚಿದೇವನನ್ನು ಕುರಿತು ವೀರಶೈವ ಕವಿಗಳೂ ಸಮಕಾಲೀನ ಶರಣರೂ ಹಾಡಿ ಹೊಗಳಿದ್ದಾರೆ. ಆದರೆ ಕಲ್ಯಾಣಕ್ಕೆ ಬರುವ ಪೂರ್ವದ ಆತನ ವಾಸ್ತವಿಕ ಜೀವನ ವಿವರ ಯಾವ ಕಾವ್ಯ ಪುರಾಣಗಳಲ್ಲಿ ಚಿತ್ರಿತ ವಾಗಿಲ್ಲ. ನಮ್ಮ ಪ್ರಾಚೀನರು ಚರಿತ್ರೆಗಿಂತ ಚಾರಿತ್ರಕ್ಕೆ ಹೆಚ್ಚು ಮಹತ್ವ ಕೊಟ್ಟುದದರಿಂದ ಪುರಾಣ ಕಾವ್ಯಗಳಲ್ಲಿ ಶುದ್ಧ ಚಾರಿತ್ರಿಕ ಅಂಶಗಳು ಕಡಿಮೆ. ಇದು ಮಾಚಿದೇವನ ಜೀವನ ವೃತ್ತಾಂತಕ್ಕೂ ಅನ್ವಯಿಸುವ ಮಾತು. ಬಸವನ ಪ್ರಭಾವವಲಯದಲ್ಲಿ ಬದುಕಿದ ಮಾಚಿದೇವ ಅವನ ಸಮಕಾಲೀನ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ನಿರ್ದಿಷ್ಟವಾದ ತೇದಿ ಕಂಡು ಹಿಡಿಯಲು ಸಮರ್ಥ ಆಧಾರಗಳಿಲ್ಲ. ಕಲ್ಯಾಣದ ವಿಪ್ಲವ ಕ್ರಿ. ಶ. ೧೧೬೭ರಲ್ಲಿ ನಡೆಯಿತೆಂಬುದು ಈಗ ಐತಿಹಾಸಿಕವಾಗಿ ಸಿದ್ಧಪಟ್ಟಿದೆ. ಈ ಕ್ರಾಂತಿಯಲ್ಲಿ ಮಾಚಿದೇವ ಬಿಜ್ಜುಗತ್ತಿಯ ಬಂಟನಾಗಿ ಹೋರಾಡಿದ್ದಾನೆ. ಅನುಭಾವದಿಂದ ಮಾಗಿದ ಆತ ಆ ಕಾಲಕ್ಕೆ ಸುಮಾರು ೩೫–೪೦ ವರ್ಷದವನಾದರೂ ಇದ್ದಿರ ಬೇಕು. ಇದರಿಂದ ಆತ ಕ್ರಿ. ಶ. ೧೧೩೦–೩೫ರ ಮಧ್ಯ ಜನಿಸಿರ ಬಹುದೆಂದು ಹೇಳಲವಕಾಶವಿದೆ.

೨. ಅವತಾರ ಕಲ್ಪನೆ:

ಬಸವಪುರಾಣ, ಚೆನ್ನಬಸವಪುರಾಣ, ಸಿಂಗಿರಾಜಪುರಾಣ, ಶಿವತತ್ತ್ವಚಿಂತಾಮಣಿ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಪ್ರಭುಲಿಂಗಲೀಲೆ, ಬಸವರಾಜ ವಿಜಯಂ, ಮಡಿವಾಳಯ್ಯನ ಸಾಂಗತ್ಯ, ಮಡಿವಾಳಯ್ಯನ ತಾರಾವಳಿ, ಮಾಚಿದೇವರ ಮನೋವಿಲಾಸ, ಶರಣಲೀಲಾಮೃತ ಮತ್ತು ಜನಪದ ಹಾಡುಗಳಲ್ಲೆಲ್ಲಾ ಮಾಚಿದೇವನ ಮಹಿಮೆಯನ್ನು ಬಣ್ಣಿಸಲಾಗಿದೆ. ಇಲ್ಲೆಲ್ಲಾ ಅವನನ್ನು ಪವಾಡಪುರುಷನನ್ನಾಗಿ ಮಾಡಿ ಸಾಕ್ಷಾತ್ ವೀರಭದ್ರನ ಅವತಾರವೆಂದು ಪೌರಾಣಿಕ ಹಿನ್ನೆಲೆ ಕಲ್ಪಿಸಲಾಗಿದೆ.

> ವೀರಭದ್ರನೆ ಅಂದು ವೀರಮಡಿವಾಳನಾಗಿ
> ಸಾರುತಲಿ ವೀರಧರ್ಮವನೆ । ಜಗಕೆಲ್ಲ
> ತೋರಿದನು ಮುಕ್ತಿಮಾರ್ಗವನು.

ಎಂತಹ ಕಠಿಣ ಪ್ರಸಂಗಗಳಲ್ಲಿಯೂ ಹೆದರದ ಧೀರೋದಾತ್ತ ನಿಲವು, ಆತ್ಮವಿಶ್ವಾಸಗಳು ಮಾಚಿದೇವನನ್ನು ವೀರಭದ್ರನ ಸ್ಥಾನಕ್ಕೇರಿಸಿರುವುದು ಸ್ಪಷ್ಟ. ಈ ವೀರಭದ್ರ – ವೀರಮಾಚಿ ದೇವ ಸಂಬಂಧ ಸೂಚಕತೆಯನ್ನು ಶ್ರೀ ಜಚನಿ ಅವರು ಚೆನ್ನಾಗಿ ಗುರುತಿಸಿದ್ದಾರೆ. "ವೀರಭದ್ರ ಕಲಿವೀರ ವೀರಗಂಟಿ ಮಾಚಿದೇವ ಕಲಿದೇವರ ಆರಾಧಕ. ಕಲಿವೀರ–ಕಲಿದೇವ, ವೀರಭದ್ರ–ವೀರ ಗಂಟಿ ಭದ್ರ–ಮಾಚಿ ಈ ಅವಳಿ ನುಡಿಗಳನ್ನು ಅರಿದು ಗಮನಿಸ ಬೇಕು, ಕಲಿದೇವನನ್ನು ಆರಾಧಿಸಿ, ಕಡುಗಲಿಯಾಗಿದ್ದಾನೆ. ಮೈಲಿಗೆಯನ್ನು ಮಾಜಿ ಮಾಚಿಯೆನಿಸಿದ್ದಾನೆ. ಮಾಚಿದೇವನ

ಮೈಯಲ್ಲಿ ಹೇಡಿತನವಿಲ್ಲ ಮನಸದಲ್ಲಿ ಮೈಲಿಗೆಯಿಲ್ಲ. ಶಿವದಲ್ಲಿ ಹುಟ್ಟಿ ಅಶಿವವನ್ನು ಹೊಡೆದೊಡಿಸುವುದೆ ವೀರಭದ್ರಾವತಾರದ ಉದ್ದೇಶ. ಯಜನ ನೆಪದಲ್ಲಿ ಯಜ್ಞಕ್ಕೆ ನಡೆವ ಪಶುಹಿಂಸೆಯು ಮಾನರ್ಷೀಯ ಮತ್ಸರವನ್ನು ಧ್ವಂಸಮಾಡುವುದೇ ವೀರಭದ್ರನ ಧ್ಯೇಯ. ಹಾಗೆಯೇ ಮಾಚಿತಂದೆ ಶಿವಾಚಾರದಲ್ಲಿ ಜನಿಸಿ ಶಿವಾಚಾರಗಳನ್ನು ಸಂರಕ್ಷಿಸಿದ, ಶಿವಾಚಾರಕ್ಕೆ ವಿರುದ್ಧವಾದುದರ ವಿರುದ್ಧ ಬಂಡೆದ್ದ ಅವಗುಣ, ಅನ್ಯಾಯಗಳನ್ನು ಕಂಡು ಸಿಡಿಲಿ ನಂತೆ ಗುಡುಗಿದ ಸಿಂಹದಂತೆ ಎರಗಿದ ಆದರೂ ನಿರ್ವಿಕಾರ, ನಿರ್ಭೀತ–ಮನಸ್ಕನಾಗಿದ್ದ" ಈ ಹಿನ್ನೆಲೆಯಲ್ಲಿ ಅವನ ವಾಸ್ತವಿಕ ಜೀವನ ವೃತ್ತಾಂತವನ್ನು ಕಾವ್ಯ–ಪುರಾಣಾದಿಗಳಿಂದ ನಾವು ಒಗ್ಗೂಡಿಸಬೇಕಾಗುತ್ತದೆ.

೩. ಜನನ ಹಾಗೂ ಬಾಲ್ಯ :

ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ದೇವರ ಹಿಪ್ಪರಿಗೆ ಮಾಚಯ್ಯನ ಜನ್ಮಸ್ಥಳ. ಅದು ಹಿರಿಯ ಸಮ ಕಾಲೀನ ಕೇಶಿರಾಜನ ಕೊಂಡಗೂಳಿಯಿಂದ ೧೦ ಮೈಲು, ಬಸವಣ್ಣನ ಬಾಗೇವಾಡಿಯಿಂದ ಉತ್ತರಕ್ಕೆ ೧೮ ಮೈಲುಗಳ ಅಂತರ ಮೇಲಿದೆ. ಮಾಚಿದೇವ ಶಿಶುವಾಗಿ, ಬಾಲಕನಾಗಿ, ಕುಮಾರನಾಗಿ ಹೇಗೆ ಬೆಳೆದನೋ ತಿಳಿಯದು. ಅವನ ತಂದೆ–ತಾಯಿಗಳ ವಿಷಯವಾಗಿ ಖಚಿತ ವಿವರಗಳು ತಿಳಿದುಬರುವುದಿಲ್ಲ. ಭೀಮಕವಿ ಮತ್ತು ಷಡಕ್ಷರದೇವರು ಆತ ಅಯೋನಿಜನೆಂದು ಜನನದ ಅಲೌಕಿಕತೆಯನ್ನು ಸಾರಿದ್ದಾರೆ. ನಂತರದ ಶರಣ ಲೀಲಾಮೃತ ಮೊದಲಾದೆಡೆಗಳಲ್ಲಿ ರಜಕ ಕಾಯಕದ ಮರು

ಪತಯ್ಯ (ಪರ್ವತಮಲ್ಲಯ್ಯ) ನಿಗೆ ಮಗನಾಗಿ ಜನಿಸಿದ ಎಂಬ ವಿಷಯ ಬಂದಿದೆ. ಮಾಚಯ್ಯನ ವ್ಯಕ್ತಿತ್ವಕ್ಕೆ ಆತನ ಹುಟ್ಟು, ತಂದೆ–ತಾಯಿಯರು ಒರೆಗಲ್ಲಾಗುವುದಿಲ್ಲವಾದರೂ ಆತ ಎಂಥ ಪರಿಸರದಲ್ಲಿ ರೂಪುಗೊಂಡ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಅವಶ್ಯವಿದೆ.

ಹಿಪ್ಪರಿಗೆ ಇನ್ನೂ ದೇವರಹಿಪ್ಪರಿಗೆ ಆಗಿರಲಿಲ್ಲ. ಅಲ್ಲಿಯ ಕಲ್ಲಿನಾಥನ ವರಕೆಯಿಂದ ಶಿವಸಂಪನ್ನ ಮಡಿವಾಳ ದಂಪತಿಗಳಿಗೆ ಹುಟ್ಟಿದ ಒಬ್ಬ ಮಗ :

ಹಿಪ್ಪರಗಿ ಮೆರೆಯುತಲಿ ಉಪ್ಪರಗಿ ಆಗೆಂದು
ತುಪ್ಪ ಹೊಳೆಯಾಗಿ ಹರಿಯುತಲಿ । ಊರೊಳಗೆ
ಅಪ್ಪ ಮಾಚಣ್ಣ ಜನಸಿದನು.

ಕುಲಗುರು ಮಲ್ಲಿಕಾರ್ಜುನ ಸ್ವಾಮಿಗಳು ಆ ಶಿಶುವಿಗೆ ಜಾತಕ ಕರ್ಮಗಳನ್ನು ನೆರವೇರಿಸಿದರು. ಸಾಮಾನ್ಯ ಮನೆತನದಲ್ಲಿ ಹುಟ್ಟಿ, ಎಲ್ಲ ಮಕ್ಕಳು ತಂದೆ–ತಾಯಿಗಳಿಗೆ ಅಚ್ಚುಮೆಚ್ಚಾಗಿರುವಂತೆ ಬೆಳೆದ ಮಾಚಯ್ಯನಿಗೆ ಗುರು ಮಲ್ಲಿಕಾರ್ಜುನರಿಂದ ವಿದ್ಯಾಭ್ಯಾಸ ಪ್ರಾರಂಭವಾಯಿತು. ಆತನ ಓದಿನ ಒಲವನ್ನು ಸುಪ್ತವಾಗಿದ್ದ ವಿಶಿಷ್ಟ ಶಕ್ತಿಯನ್ನು ಗುರುತಿಸಿದ ಗುರುಗಳು ವಿಶೇಷ ಮಮತೆಯನ್ನು ತೋರಿದರು. ಬಾಲಕ ಮಾಚಯ್ಯ ಓದನ್ನು ಮುಗಿಸಿ ವೃತ್ತಿನಿರತನಾದ.

ಮಡಿವಾಳ ಮಾಚಣ್ಣ ಕಡುಭಕ್ತ ತಾನಾಗಿ
ಹಡೆದವರ ಕೆಲಸ ಕೈಕೊಂಡ ಊರೊಳಗೆ
ಬಡವರಿಗೆ ಭಾಗ್ಯನಿಧಿಯಾದ.

ಹೀಗೆ ಬಡವರಿಗೆ ಭಾಗ್ಯನಿಧಿಯಾಗಿ ಕಾರ್ಯನಿರತನಾದ ಮಾಚಿ ದೇವನಿಗೆ ತನ್ನ ಸುತ್ತಣ ಸಮಾಜದ ಅರಿವಾಗತೊಡಗಿತು. ಧಾರ್ಮಿಕ ಡಂಭಾಚಾರ, ಸಮಾಜದ ಮೇಲು-ಕೀಳು ಆತನನ್ನು ಕೆರಳಿಸಿದವು. ಆಚಾರವೀರನಾದ ಆತ ಅವನ್ನು ಸಹಿಸಲಿಲ್ಲ. ಸಾಮಾನ್ಯ ವರ್ಗದವನಾದ ಆತ ಸಾಮಾನ್ಯರನ್ನು ಪ್ರತಿನಿಧಿಸಿ ಅವರ ಪ್ರೀತಿಗೆ ಪಾತ್ರನಾದ. ಅವನ ಆಚಾರ-ವಿಚಾರಗಳಿಗೆ ಹಿಪ್ಪರಿಗೆ ಪ್ರೋತ್ಸಾಹದಾಯಕ ವಾತಾವರಣವನ್ನು ಒದಗಿಸಿ ಕೊಡಲಿಲ್ಲವೆಂದು ಕಾಣುತ್ತದೆ. ಆತನ ಮಣಿಹ ದೊಡ್ಡದಿತ್ತು, ಗುರುಗಳು ಅದನ್ನರಿತಿದ್ದರು. ಕಾಲ ಕೂಡಿ ಬರುವವರೆಗೆ ಮಾಚಯ್ಯನನ್ನು ಅಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಸಿದರು. ಆದರೆ ಮಾಚಯ್ಯನ ಅತೃಪ್ತ ಮನಸ್ಸು ತೃಪ್ತಿಗಾಗಿ ಹಂಬಲಿಸು ತ್ತಿತ್ತು.

೪. ಕಲ್ಯಾಣದತ್ತ ಪಯಣ :

ಅದೇ ಆಗ ಕಲ್ಯಾಣದಲ್ಲಿ ಬಸವ ಹೂಡಿದ ಆಂದೋಲನ ನಾಡಿನ ನಾನಾ ಭಾಗಗಳಿಗೂ ಪಸರಿಸತೊಡಗಿತ್ತು. ಬಸವನ ಮಹಿಮೆ ಕರ್ಣಾನುಕರ್ಣಿಕೆಯಿಂದ ಹಿಪ್ಪರಿಗೆಯ ಮಾಚಿದೇವ ನಿಗೂ ತಲುಪಿ, ಆಕರ್ಷಿಸಿತು.

ಬಾಗೋಡಿ ಬಸವಣ್ಣ ಸಾಗುತಲಿ ಕಲ್ಯಾಣ
ಕೂಗಿಡಲು ಭೂಮಿ ಲಿಂಗಗಳ । ವೈಭವವ
ತೂಗುತಲಿ ಧರ್ಮ ತೊಟ್ಟಿಲವು.

ಇದನ್ನೇ ಪರೀಕ್ಷಿಸುತ್ತಲಿದ್ದ ಗುರುಗಳು ಕಲ್ಯಾಣ ಕ್ಷೇತ್ರದಲ್ಲಿ ನಡೆ ಯುತ್ತಿದ್ದ ಕಾರ್ಯವ್ಯಾಪ್ತಿಯ ವಿವರಗಳನ್ನು ಮಾಚಯ್ಯನಿಗೆ ಒದ

ಗಿಸಿ ಅದು ಅವನಿಗೆ ತಕ್ಕುದಾದ ಸ್ಥಳವೆಂಬುದನ್ನು ಮನಗಾಣಿಸಿ ಕೊಟ್ಟರು. ಗುರುಕಾರುಣ್ಯವನ್ನು ಪಡೆದ ಮಾಚಯ್ಯ ಕಲ್ಯಾಣ ದತ್ತ ಪಯಣ ಬೆಳೆಸಿದ. ಈ ದಿಶೆಯಲ್ಲಿ ಆತ ಕಲಕೇರಿ ಮತ್ತು ಕೊಂಡಗೂಳಿಯಲ್ಲಿ ಒಂದೆರಡು ದಿನ ವಾಸ್ತವ್ಯ ಮಾಡಿರುವ ಸಾಧ್ಯತೆಯಿದೆ. ಸದ್ಯ ಅಲ್ಲಿರುವ ಮಡಿವಾಳೇಶ್ವರ ಗುಡಿಗಳು ಈ ಸಂಬಂಧವನ್ನು ಸೂಚಿಸುತ್ತವೆ.

ಜೀವದ ಹಂಗುತೊರೆದು ಉತ್ಸಾಹದಿಂದ ಕಲ್ಯಾಣ ಪಟ್ಟಣವನ್ನು ಸಮೀಪಿಸಿದ. ಬಾಗಿಲಲ್ಲಿ ಕೈಮುಗಿದು ಒಳಗೆ ಪ್ರವೇಶಿಸಿದ ಮಾಚಯ್ಯ ಕಾಯಕನಿಷ್ಠನಾಗಿ ಕಲ್ಯಾಣವನ್ನು ಕಂಡ ಬಗೆ ಇದು :

ಹೊಗಬಾರದು ಕಲ್ಯಾಣವನಾರಿಗೆಯು
ಹೊಕ್ಕಡೇನು ? ಕಲ್ಯಾಣದ ಸ್ಥಾನಮಾನಂಗಳನರಿಯ
ಬಾರದು
ಕಲ್ಯಾಣದ ಕಡೆಯು ಕಾಣಬಾರದು
ಕಲ್ಯಾಣದೊಳಗೆ ಹೊಕ್ಕೆಹೆನೆಂದು
ಕಲ್ಯಾಣ ಚರಿತ್ರರಾದೆವೆಂದು
ದೇವದಾನವ ಮಾನವರೆಲ್ಲರೂ ಭಾವಿಸುತ್ತಿರ್ದರು
ನೋಡಾ !

....

ಆಸೆಗೆಡೆಗುಡದಿಪ್ಪುದೆ ಕಲ್ಯಾಣ
ಸರ್ವಾಂಗವರ್ಣವಳಿದು ಕುಲಮದ ತಲೆದೋರದೆ
ಭಕ್ತಿನಿತ್ಯವಾದುದೆ ಕಲ್ಯಾಣ

ಪುಣ್ಯಕ್ಕೆ ಅಭಿಲಾಷೆಯನ್ನು ಮಾಡುವ ಕಲ್ಯಾಣ ಅವನ ದೃಷ್ಟಿಯಲ್ಲಿ ಒಂದು ದಿವ್ಯಕ್ಷೇತ್ರ. ಸಿಕ್ಕಸಿಕ್ಕವರಿಗೆ ಅಲ್ಲಿ ಪ್ರವೇಶವಿಲ್ಲ. ಲಿಂಗದೃಷ, ಲಿಂಗವೇದ್ಯ, ಲಿಂಗಗಂಭೀರ, ಪ್ರಸಾದ ಕುಳಾನ್ವಯರು ಮಾತ್ರ ಅದನ್ನು ಕಾಣಬಹುದು. ಆಸೆಗೆಡೆಗೊಡದ, ಸರ್ವಾಂಗ ವರ್ಣವಳಿದ, ಭಕ್ತಿನಿತ್ಯ ಕುಲಮದವಿಲ್ಲದ ಮಹಾಘನ ಆವಾಸಸ್ಥಾನವದು.

೫. ಧೀರ ಕಾಯಕದ ಹುರಿಯಾಳು :

'ಕಾಯಕವೇ ಕೈಲಾಸ'ವೆಂಬ ಆಯ್ದಕ್ಕಿ ಮಾರಯ್ಯನ ಉಕ್ತಿ ಅಂದು ಕಲ್ಯಾಣ ಶಿವಶರಣರ ಉಸಿರಾಗಿತ್ತು. ಸತ್ಯ ಶುದ್ಧ ಕಾಯಕ ಭಕ್ತತ್ವದ ಮುಖ್ಯ ಲಕ್ಷಣವಾಗಿದ್ದಿತು. ಅದರಲ್ಲಿ ಮೇಲು ಕೀಳೆಂಬುದಿರಲಿಲ್ಲ. ಕಾಯದ ಕಳವಳ, ಹರಣದ ಹಂಗು, ಒಡಲ ಕಕ್ಕುಲತೆ ಕಾಯಕವಂತನಿಗಿರಲಿಲ್ಲ. ಕಾಯಕ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು. ಲಿಂಗಮುಂದಿದ್ದರೂ ಹಂಗುಹರಿಯಬೇಕು. ಇದು ಶರಣರ ಕಾಯಕದ ವೈಶಿಷ್ಟ್ಯವಾಗಿತ್ತು.

ಕಲ್ಯಾಣದಲ್ಲಿ ಹೊಸ ಬದುಕನ್ನು ಪ್ರಾರಂಭಿಸಿದ ಮಾಚಯ್ಯ ಮನೆವೃತ್ತಿಯನ್ನು ಮರೆಯಲಿಲ್ಲ. ಶರಣ ವಸ್ತ್ರಗಳನ್ನು ಮಾತ್ರ ಮಡಿಮಾಡುವ ನಿರ್ಧಾರ ಕೈಕೊಂಡ. ಈ ವೀರನಿಷ್ಠೆ ಶರಣರನ್ನು ಆಕರ್ಷಿಸಿತು. ಕಲ್ಯಾಣ ಮಾಚಯ್ಯನ ದಿವ್ಯವ್ಯಕ್ತಿತ್ವಕ್ಕೆ ಸಾಧನರಂಗವಾಯಿತು. ಶರಣರ ಅನುಭಾವದಡಿಯಲ್ಲಿ ಆತನ ಕಾಯಕನಿಷ್ಠ ಜೀವನ ಕುಸುಮಿಸತೊಡಗಿತು. ಶರಣರ ಬಟ್ಟೆಗಳನ್ನು ಮಡಿಮಾಡುವ ಕಾಯಕ ಒಂದು ದಿವ್ಯ ಅನುಭವವಾಗಿ ಪರಿಣಮಿಸಿತು.

ಗಂಡುಗಚ್ಚೆ ಹಾಕಿ ಭಸ್ಮರುದ್ರಾಕ್ಷಾಲಂಕೃತರಾಗಿ ಸೊಂಟದಲ್ಲಿ ಕಠಾರಿ ಕೈಯಲ್ಲಿ ವೀರಘಂಟೆ ಹಿಡಿದುಕೊಂಡು, ದಿನಾಲು ಅರುಣೋದಯಕ್ಕಿಂತ ಮುಂಚೆಯೇ, ಶರಣರುಟ್ಟು ಬಿಟ್ಟ ಬಟ್ಟೆಗಳ ಹೊರೆಯನ್ನು ಹೊತ್ತು ರಜತಾದ್ರಿಯ ಹಾಗೆ ನಡೆಯುವ ಅವರ ದಿಟ್ಟ ನಿಲುವು ಯಾರಲ್ಲಿಯಾದರೂ ಗೌರವವನ್ನು ಮೂಡಿಸುವಂತಿತ್ತು. ಪ್ರತ್ಯೇಕ ಒರತೆಯ ತಿಳಿನೀರಿನಿಂದ ಬಟ್ಟೆಗಳನ್ನೆಲ್ಲ ಮಡಿಮಾಡಿ ಒಣಗಿಸಿ ಮಡಿಕೆಗೊಳಿಸಿ ಹೊರೆಗಟ್ಟಿ ಹೊತ್ತು ರಾಜಬೀದಿಯಲ್ಲಿ ಬರುತ್ತಿದ್ದ ಚಿತ್ರ ಷಡಕ್ಷರ ಕವಿಯ ಕಣ್ಣಿಗೆ ಜಂಗಮ ಹಿಮಾಚಲದಂತೆ ಕಂಡಿದೆ! ಶಿವಭಕ್ತರ ಮಡಿ ಬಟ್ಟೆಗಳನ್ನು ಅನ್ಯರು ಮುಟ್ಟಬಾರದೆಂಬುದು ಅವನ ವ್ರತ. ಅದರ ಎಚ್ಚರಿಕೆಗಾಗಿ ಜಡರುಗಳಿರಾ ತೊಲಗಿ ಭೋ ಎನುತಡಿಗಡಿಗೆ ಜಯಘಟೆಯ ವೀರಘಂಟಾನಿನಾದ. ಅದರ ಹಿಂದೆ ಆಚಾರ ರಕ್ಷಣೆಗಾಗಿ ಟೊಂಕದಲ್ಲಿ ಕಠಾರಿ. ಆತನ ಆಚಾರ ನಿಷ್ಠೆಯು ಈ ಕುರುಹು ವೀರಶ್ರೀಗೆ ದ್ಯೋತಕವಾಗಿದೆ. ಆತನ ವೀರಘಂಟೆಯ ನಾದ ಹೇಡಿಯದಲ್ಲ ಗಣಾಚಾರಿಯದು. ಶೀಲ ಸಂರಕ್ಷಣೆಯಲ್ಲಿ ಆತ ತಳೆದ ಧೈರ್ಯ, ಶೌರ್ಯಗಳ ನಿಲುವನ್ನು ಈ ವೀರಘಂಟೆಯ ವಿಶೇಷಣ ಸಮರ್ಥಿಸುತ್ತದೆ.

ಮಾಚಯ್ಯನ ಸತ್ಯಶುದ್ಧ ಕಾಯಕದ ಈ ಅಗ್ಗಳಿಕೆ ಕಲ್ಯಾಣವೆಲ್ಲಾ ವ್ಯಾಪಿಸಿ ಶರಣರಲ್ಲದವರ ಕಣ್ಮನಗಳನ್ನು ಚುಚ್ಚಿತು. ಎಲ್ಲರಂತಲ್ಲದ ಈ ನಿಲುವನ್ನು ಕಂಡು ಅವರು ಕರುಬಿದರು.

ಹೆಮ್ಮೆಯಲಿ ಕೊಬ್ಬಿರುವ ಹುಮ್ಮ ನರಪಾಪಿಗಳು
ತಮ್ಮ ತಮ್ಮೊಳಗೆ ಮಾತಾಡಿ । ಮಾಚನಿಗೆ
ಬಿಮ್ಮಲಿ ತಡವಿ ಹಾದಿಯಲಿ.

ಕುಹಕತನದಿಂದ ಭವಿಯೊಬ್ಬ ಅವನ ನಿಯಮ ಮೀರಿ ಮಡಿ ಬಟ್ಟೆಗಳನ್ನು ಮುಟ್ಟಿದ ಕೂಡಲೇ ಮಾಚಯ್ಯ ಅವನ ತಲೆಯನ್ನು ಕಡಿದು ಗಗನಕ್ಕೆ ಹಾರಿಸಿದನೆಂದು ಜನಪದ ಸಾಹಿತ್ಯ ಹೇಳುತ್ತದೆ. ಆಗ ಜನ ಅರಸನಲ್ಲಿ ದೂರಿದರು. ದೊರೆ ಬಿಜ್ಜಳ ಮಂತ್ರಿ ಬಸವನೊಡನೆ "ವಿಪರೀತ ಮಿಸುಕಬಾರದು ನಿಮ್ಮ ಭಕ್ತರ ದೆಸೆಯೊಳ್" ಇಂಥ ಚೋದ್ಯವನ್ನು ಎಲ್ಲಿಯೂ ಕಂಡುದಿಲ್ಲ. ಮಾಸಿದರಿವೆಗಳನ್ನು ಬಡಿಯಲು ಹೇಸುವ ಈ ಅಗಸ ಕೊಬ್ಬಿ ಭಕ್ತನೆನುತ ಪಟ್ಟಣದ ಜನರನ್ನು ಚರಿಸಲೀಯ. ಮುಟ್ಟಿದಡೆ ಮುರುಟುವುದೆ ಸೀರೆಯ ಮೊಟ್ಟೆ? ಬಟ್ಟೆಗಳನ್ನು ಮುಟ್ಟಿದರೆ ಕೊಲ್ಲುವದು ಭಕ್ತರಿಗೆ ಸರಿಯೆ? 'ಸೊರ್ಕಿದಸಗನ ದಟಂ ಮುರಿಯದೆ ಬಿಡೆನೆಂದು' ಸಿಟ್ಟುಗೊಂಡ ದೊರೆಯನ್ನು ಬಸವಣ್ಣ ಮಧ್ಯ ತಡೆದು ಸುಚರಿತ್ರನಾದ ಆ ಸದ್ಭಕ್ತ ಸಾಮಾನ್ಯನಲ್ಲ ಸಾಕ್ಷಾತ್ ಶಿವಸ್ವರೂಪನು. ಹಿಂದೆ ಆತ್ಮಲೀಲೆಯಿಂದ ಪಾರ್ಥಹಿತಾರ್ಥಕ್ಕಾಗಿ ಕಿರಾತನೆನಿಸಿರ್ದ, ಈಗಶರಣ ಹಿತಾರ್ಥಕ್ಕಾಗಿ ಮಾಚಯ್ಯ ರಜಕನೆನಿಸಿದ್ದಾನೆ. ಶಿವಭಕ್ತರ ಬಟ್ಟೆಗಳನ್ನು ಮಾತ್ರ ಒಗೆಯುವ ಆತ ಅನ್ಯವಸನಗಳನ್ನು ಮುಟ್ಟ. ಪರಿಶುದ್ಧ ಶರಣವಸ್ತ್ರಗಳನ್ನು ದುರ್ಜನರರು ಮುಟ್ಟುವುದನ್ನು ಸೈರಿಸ. ಕಾರಣ ಶಿವಶರಣರ ಮಹಿಮೆಯನ್ನು ತಿಳಿಯದೆ ದುಡುಕುವದು ಸರಿಯಲ್ಲ ಎನ್ನಲು:

ಬಸವನಾಡಿದ ಮಾತ ಕಸಕಿಂತ ಕಡೆಮಾಡಿ
ನಸುಕಿನಲಿ ಕಳಸಿದ ಜಟ್ಟಿಗಳ । ಆನೆಗಳ
ಕಸ ತುಳಿಸಿದಂತೆ ತುಳಿಸುದಕೆ

ಸೂರ್ಯೋದಯವಾಯಿತು. ಆ ದೃಶ್ಯ ಜಾನಪದ ಕವಿಯ ಕಣ್ಣಿಗೆ ಕಾಯಕದ ಕಿರಣ ಜಗವನ್ನು ಬೆಳಗುವ ಹಾಗೆ ಕಂಡಿದೆ.

ಮರುದಿನವೆ ನಸುಕ್ಹರಿದು ಹರಸಿದನು ದಿನದೊಡೆಯ
ಶರಣ ಮಾಚನಿಗೆ ಬಲುಬೆಳಕ । ಕಾಯಕದ
ಕಿರಣ ಬೆಳಗೆಂದ ಜಗಕೆಂದು

ಅಂದು ಕಾಯಕನಿರತ ಮಾಚಿದೇವ ತನ್ನ ಮೇಲೆ ಅಬ್ಬರಿಸಿ ಬರುವ ಮದ್ದಾನೆಯನ್ನು ಕಂಡು ಒಮ್ಮೆ ಜಯಘಂಟೆಯನ್ನು ಬಾರಿಸಿ 'ಸಾಯದೆ ಹೊಳ್ಳುಗಳಿರಾ ಹಾಜೆನುತ್ತಾ' ಹೊತ್ತಿದ್ದ ಬಟ್ಟೆಯ ಹೊರೆಯನ್ನು ಆಕಾಶದಲ್ಲಿ ನಿಲ್ಲಿಸಿ ಎರಡು ಕೈಗಳ ನುದ್ದಿಕೊಳುತ ಅಬ್ಬರಿಸಿ ಶೌರ್ಯದಿಂದ ಮಹಾರುದ್ರನಂತೆ ಮುನ್ನುಗ್ಗಿದ. ನುಗ್ಗಿಬಂದ ಸೈನ್ಯಸಮೂಹ ನಡನಡನಡುಗಿ ಸತ್ತೇವು ಕೆಟ್ಟೇವು ಎಂದು ಎದ್ದುಬಿದ್ದು ಓಡಿತು. ಮಾಚಿದೇವ ಮಾವುತರನ್ನು ಬೀಳುಹೊಯ್ದು ಆನೆಯ ಸೊಂಡಿಲನ್ನು ಹಿಡಿದೊತ್ತಿ ಹಿಸುಕಿ ನೆಲಕ್ಕುರುಳಿಸಿದ. ಕೊನೆಗೆ ಬಿಜ್ಜಳ ತಪ್ಪನ್ನೊಪ್ಪಿಕೊಂಡು ಶರಣುಬಂದ. ಮಾಚಿದೇವ ಕರಿಕಾಲಾಳುಗಳನ್ನೆಲ್ಲ ಬದುಕಿಸಿ ಕರುಣಿಸಿದ.

ಚೆನ್ನಪ್ಪ ಕವಿಯ ಶರಣಲೀಲಾಮೃತ ಮೊದಲಾದೆಡೆಗಳಲ್ಲಿ ಇದೇ ಕಥೆ ಬೇರೊಂದು ರೀತಿಯಲ್ಲಿ ಬಂದಿದೆ. ಒಮ್ಮೆ ಬಸವಣ್ಣನ ಬಟ್ಟೆಗಳ ಶುಭ್ರತೆಗೆ ಮಾರು ಹೋದ ಬಿಜ್ಜಳ ಮಡಿವಾಳನಿಂದ ತನಗೂ ಸೇವೆ ಸಲ್ಲಬೇಕೆನ್ನುತ್ತಾನೆ. ಆತ ಸಾಮಾನ್ಯ ಅಗಸನೆಂದು ತಿಳಿಯಬಾರದೆಂಬ ಬಸವನ ಮಾತನ್ನು ಅಲಕ್ಷಿಸಿ ರಾಜ ಮಾಸಿದ ಬಟ್ಟೆಗಳನ್ನು ಮಾಚಯ್ಯನೆಡೆಗೆ ಕಳುಹಿಸಿದಾಗ

ಅವನ ಕೋಪದಿಂದಲೇ ಅವೆಲ್ಲ ಉರಿದು ಹೋಗುತ್ತವೆ. ಆತನನ್ನು ಹಿಡಿತರಲು ಕಳುಹಿಸಿದ ಕುರುಡು ಕುಂಟರ ಪಡೆಯ ಮೇಲೆ ನೀರನ್ನು ಸಿಂಪಡಿಸಿ ಮಾಚಿದೇವ ಅವರನ್ನೆಲ್ಲ ಹರೆಯದ ಅಂಗಸೌಷ್ಟವವುಳ್ಳವರನ್ನಾಗಿ ಮಾಡುತ್ತಾನೆ. ಕೋಪದಿಂದ ರಾಜ ತನ್ನ ಸೈನ್ಯವನ್ನೆ ಕಳುಹಲು ಅವರನ್ನೆಲ್ಲ ಸದೆಬಡಿಯುತ್ತಾನೆ ಇಲ್ಲಿಯ ಅದ್ಭುತ ಕಥೆಗಳ ಸತ್ಯಾಸತ್ಯತೆ ಏನೇ ಇದ್ದರೂ ಒಂದಂಶ ಮಾತ್ರ ಸ್ಪಷ್ಟವಾಗುತ್ತದೆ. ಶರಣರ ಬಗ್ಗೆ ಬಿಜ್ಜಳನ ಮನಸ್ಸು ಕಲುಷಿತವಾಗಿತ್ತು. ಅದನ್ನೆಲ್ಲ ಗಮನಿಸದೇ ಮಾಚಯ್ಯ ನಂಥ ಶರಣರು ತಮ್ಮ ದಿಟ್ಟತನದಿಂದ ಕಾಯಕದಲ್ಲಿ ಅತೀವ ನಿಷ್ಠೆಯನ್ನು ಹೊಂದಿದ್ದರು.

೬. ಮದುವೆ ವಿಚಾರ :

ಮಾಚಯ್ಯನಿಗೆ ಮಲ್ಲಿಗಮ್ಮ ಎಂಬ ಅನುಕೂಲೆಯೊಡನೆ ಮದುವೆಯಾಗಿತ್ತು ಎಂಬ ವಿಷಯ ಬರುತ್ತದೆ. ಮಾಚಯ್ಯ ನನ್ನು ಸಂಸಾರದಿಂದ ದೂರಮಾಡಬಯಸಿದ ಪರಮೇಶ್ವರ ಜಂಗಮ ರೂಪದಲ್ಲಿ ಬಂದು ನೀರಿಗೆ ಹಾಕದೆ, ಕಲ್ಲಿಗೆ ಸೋಕಿಸದೆ, ರವಿಕಿರಣಕ್ಕೆ ಮುಟ್ಟಿಸದೆ ಬಟ್ಟೆಯನ್ನು ಮಡಿಮಾಡಿ ತರಲು ಹೇಳಿದನಂತೆ! ಈ ಸತ್ವ ಪರೀಕ್ಷೆಯನ್ನು ಅರಿತ ಆತನ ಸತಿಯು ಪತಿಯ ಕಾಯಕ ನಿಷ್ಠೆಗಾಗಿ ಶಿವನನ್ನು ಸ್ತುತಿಸಿ ತನ್ನ ಕೈಕಾಲು ಗಳನ್ನು ಬಂಡೆಯನ್ನಾಗಿಸಿ ಕಣ್ಣುಗುಡ್ಡೆ ಮಿದುಳುಗಳನ್ನು ನೀಲಿ ಗಂಜಿಯನ್ನಾಗಿಸಿ ರಕ್ತವೆಂಬ ನೀರಿನಲ್ಲಿ ತೊಳೆದು ದುಃಖವೆಂಬ ತಾಪದಲ್ಲಿ ಒಣಗಿಸಿ ಮಡಿಮಾಡಲು ಹೇಳಿ ಶಿವನಲ್ಲಿ ಐಕ್ಯ ಳಾದಳು. ಆ ಸ್ಥಳವೇ ಇಂದು ಕಲ್ಯಾಣದ ಪಡುವಣ ದಿಕ್ಕಿನಲ್ಲಿ

ರುವ ಮಾಚಯ್ಯನ ಹೊಂಡವೆಂದೂ ಈ ನಿಷ್ಠೆಗೆ ಮೆಚ್ಚಿದ ಶಿವ ನಿನ್ನ ಜನಾಂಗಕ್ಕೆ ಮೊಳಕಾಲುದ್ದ ನೀರು ಮನೆತುಂಬ ಅನ್ನ. ಮಡಿವಾಳನೆಂದರೆ ಮಾಚಿದೇವ ಮಾಚಿದೇವನೆಂದರೆ ಮಡಿವಳ ಎಂದಿರಲಿ ಎಂದು ಆಶೀರ್ವದಿಸಿದನೆಂದೂ ಪ್ರತೀತಿ. ಈ ಕಥೆ ಜಾನಪದ ಪಂತಿ ಹಾಡಿನಲ್ಲಿ ಮತ್ತೊಂದು ರೂಪವನ್ನು ಪಡೆದಿದೆ.

ಮಾಚಯ್ಯನನ್ನು ನೇರವಾಗಿ ಎದುರಿಸಿದ ಬಿಜ್ಜಳ ಆತನ ಕಾಯಕನಿಷ್ಠೆಗೆ ದಿಗ್ಬಂದನ ಹಾಕುತ್ತಾನೆ. ಅಂದು ಹೊತ್ತು ಮುಳುಗುತ್ತ ಬಂದರೂ ಮಾಚನಿಗೆ ಶರಣರ ಬಟ್ಟೆಗಳನ್ನು ಮಡಿ ಮಾಡಲು ಸಾಧ್ಯವಾಗಲಿಲ್ಲ. ಎಲ್ಲಿಯೂ ನೀರು ಸಿಕ್ಕದೆ ಮನೆಗೆ ಬಂದ ಮಾಚಿದೇವ ಹೆಂಡತಿಯು ಮುಂದೆ 'ಕಾಯಕದ ಬುತ್ತಿ ತೀರಿತ್ತೈ ಈ ದಿನಕೆ' ಎನ್ನುತ್ತಾನೆ. ಪತಿಭಕ್ತೆಯಾದ ಹೆಂಡತಿ ಧೈರ್ಯ ನೀಡುತ್ತಾಳೆ.

ಮಾಚಯ್ಯನಾ ಮಡದಿ ಸೂಚನೆಯಾನೀಯುತಲಿ
ಯಾಚನೆಯು ಬೇಡ ಪತಿದೇವ । ನೀನೆನ್ನ
ನಾಚದಲೆ ಹಿಂಡು ಎದೆರಗುತ–
ಆ ಕ್ಷಣದಲ್ಲಿಯೇ :
ಪಡದಿ ಹಾಸಿದ ಮಾಚ ಮಡದಿಯುದೆ ತಾ ಕೊಯ್ದು
ಒಡನೆ ಬಲು ಚಿಮ್ಮಿ ಬಿಸಿರಗುತ । ಹೊಳೆಯಾಗಿ
ಮಡುಗಟ್ಟಿ ನೀರ ಕೆರೆಯಾತು.
ಮಡಿವಾಳ ಮಾಚಯ್ಯ ಧೃಢವುಳ್ಳ ಶಿವಭಕ್ತ
ಮಡದಿಯಾನು ಕೊಂದು ರಗುತದಲಿ । ತಾ ತೊಳೆದ
ಒಡೆಯನೊಪ್ಪಿರವ ಭಕುತಿಯಲಿ.

ಈ ಪ್ರಸಂಗ ಉಳಿದಡೆಗೆಲ್ಲಿಯೂ ಉಕ್ತವಾಗಿಲ್ಲ. ಜಾನಪದ ಕವಿ ಆತನ ಕಟುತರ ಭಕ್ತಿಯನ್ನರುಹಲು ಇದನ್ನು ರೂಪಿಸಿ ಕೊಂಡಿರಬೇಕು. ಸಂಸಾರಿಕ ಜೀವನ ಶರಣ ಧರ್ಮಕ್ಕೆ ವಿರೋಧ ವಾದುದಲ್ಲವಾದರೂ ಆತನ ಮದುವೆ ಯಾವಾಗ, ಎಲ್ಲಿ ಆಯಿತು ಗೊತ್ತಾಗುವದಿಲ್ಲ. ಅವನ ಸಂಸಾರಿಕ ಜೀವನದ ಬಗೆಗೆ ಹೆಚ್ಚಿನ ವಿಷಯಗಳೇನೂ ತಿಳಿದು ಬರುವದಿಲ್ಲವಾಗಿ ಆತನ ಮದುವೆ ವಿಚಾರ ಸಂದೇಹಕ್ಕೆಡೆಮಾಡಿಕೊಟ್ಟಿದೆ.

೭. ಸತ್ಯನಿಷ್ಠ :

ಮಾಚಿದೇವ ಕಾಯಕನಿಷ್ಠನಾದಂತೆ ಸತ್ಯನಿಷ್ಠನೂ ಆಗಿದ್ದ. ತಪ್ಪೆಲ್ಲಿದ್ದರೂ ಅದನ್ನು ತೋರಿಸದೆ ಬಿಡುವವನಲ್ಲ ಆತ. ಮಡಿ ವಾಳನ ಮಹಾಪ್ರಸಾದದಿಂದ ಬದುಕಿದ ಶಿವಶರಣರು ಅವನ ಚಿತ್ತಪ್ರಸನ್ನತೆಗೆ ಬೆರಗಾಗಿದ್ದಾರೆ, ಸತ್ಯನಿಷ್ಠೆಗೆ ತಲೆದೂಗಿದ್ದಾರೆ.

ಒಮ್ಮೆ ಕಲ್ಯಾಣದ ಶರಣರಲ್ಲೊಬ್ಬರಾದ ಸುಲಿಯ ಚೆಂದಯ್ಯನವರು ದಿನನಿತ್ಯದ ತಮ್ಮ ಕಾಯಕದಂತೆ ಸುಲಿ ಮಾಡಲು ಹುಲ್ಲನ್ನು ತೊಳೆಯುತ್ತಿರುವಾಗ ಅವರ ಇಷ್ಟಲಿಂಗ ಜಾರಿ ಕೆರೆಯೊಳಗೆ ಬೀಳುತ್ತದೆ. ತಾನಾಗಿ ಬಿದ್ದ ಲಿಂಗವನ್ನು ಹುಡುಕುವ ಗೋಜಿಗೆ ಹೋಗದೆ 'ಕಾಯಕದಲ್ಲಿ ನಿರತನಾದಡೆ ಗುರುದರುಶನವಾದರೂ ಮರೆಯಬೇಕು', 'ಜರಸೇವೆ ಬೇಕಾದಡೆ ಲಿಂಗ ತಾನೆ ಬಂದಿತ್ತು'ಎಂದು ಹುಲ್ಲಿನ ಹೊರೆಹೊತ್ತ ಚೆಂದಯ್ಯ ದಿಟ್ಟ ಹೆಜ್ಜೆಯಲ್ಲಿ ಮನೆಗೆ ನಡೆದ. ಪುರುಷಾಕಾರವನ್ನು ತಳೆದ ಇಷ್ಟಲಿಂಗ ಹಿಂದೆಯೇ ಬಂದು 'ನಾನು ಬಂದೆನು ಬಿಟ್ಟು ಹೋಗ ದಿರಯ್ಯಾ' ಎಂದು ಕೇಳಿಕೊಂಡರೂ ಚೆಂದಯ್ಯ ಒಪ್ಪಲಿಲ್ಲ. ನ್ಯಾಯ ಅಲ್ಲಿಯೆ ಬಟ್ಟೆ ಮಡಿ ಮಾಡುತ್ತಿದ್ದ ಮಡಿವಾಳಯ್ಯಗಳ

ವರೆಗೂ ಹೋಯಿತು. 'ಗುರುಪಾದರೂ ಲಿಂಗವ ಪೂಜಿಸ ಬೇಕು. ಜಂಗಮಕ್ಕೆ ಲಿಂಗವಿಲ್ಲದೆ ಪ್ರಮಾಣವಿಲ್ಲ ಕಾರಣ ಬಂದೆ ನೆಂದರೆ ಬೇಡವೆನಲೇಕೆ ಚೆಂದಯ್ಯ' ಎಂದು ಮಾಚಿದೇವ ಎಷ್ಟು ಹೇಳಿದರೂ ಕೇಳಲಿಲ್ಲ. ಕೊನೆಗೆ ಒಡೆಯರ ದಾಸೋಹಕ್ಕೆ ಲಿಂಗ ಕಾಯಕ ಮಾಡಬೇಕೆನ್ನುವ ಕರಾರಿನ ಮೇಲೆ ಚೆಂದಯ್ಯ ಲಿಂಗ ದೇವನನ್ನು ಮನೆಗೆ ಕೊಂಡುಹೋಗುತ್ತಾನೆ.

ಲಿಂಗಯ್ಯ ನಿತ್ಯಕಾಯಕದಂತೆ ಸುಲಿಯನ್ನು ಹೊಸೆದು ಕಣ್ಣಿಯ ಮಾಡಿ ಸಂಗನಬಸವನ ಮನೆಗೆ ಬರುತ್ತಾನೆ. ಚೆಂದಯ್ಯ–ಲಿಂಗಯ್ಯರ ವಿರಸ ಸಮಾಚಾರವನ್ನರಿತ ಬಸವಣ್ಣ ಶರಣು ಮಾಡಿ ಸಾವಿರ ಹೊನ್ನಿಗೆ ಕಣ್ಣಿಯನ್ನು ತೆಗೆದುಕೊಂಡು ಲಿಂಗಯ್ಯ ನನ್ನು ಬೀಳ್ಕೊಡುತ್ತಾನೆ. ಸಾವಿರ ಹೊನ್ನನ್ನು ತಂದ ಲಿಂಗಯ್ಯ ನನ್ನು ಕಂಡು 'ಇದೆಲ್ಲಿಂದ ತಂದೆಯಯ್ಯಾ? ಕಳವಿಂದ ತಂದೆಯಾ? ಎಂದು ಕಿಡಿಕಿಡಿಯಾದ ಚೆಂದಯ್ಯ, "ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ ತಾ ಮಾಡುವ ಸೇವೆ ನಷ್ಟವಯ್ಯಾ'. ಕಂದಿಸಿ ಕುಂದಿಸಿ ಬಂಧಿಸಿ ಕಂಡಕಂಡವರ ಬೇಡಿತಂದು ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗಕ್ಕೆ ನೈವೇದ್ಯ ಸಲ್ಲದು! ಕಾಶಿಯ ಸೊಪ್ಪಾದಡೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿ ತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ" ಕಾರಣ ನೀ ತಂದ ಅನ್ಯದ್ರವ್ಯಸಹಿತ ನೀನೆಲ್ಲಿಗೆಯಾದರೂ ಹೋಗು ಎಂದ. ಇದನ್ನರಿತ ಮಾಚಯ್ಯ :

ಕಾಯಕದಲ್ಲಿ ನಿಂದ ಶರಣಂಗೆ ಸೇವೆಯುವರ ತಪ್ಪು
ಹಿಡಿದೆನೆಂದರೆ
ಕಾಯಕವೆಂತು ನಡೆವುದಯ್ಯಾ ?
ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛನಕ್ಕೆ
ಮುನಿಯಬೇಕೆ ?
ಮುಗ್ಗಿದ ತುರಗನ ಕಾಲಕತ್ತರಿಸಿದವರುಂಟೆ ?
ಕಚ್ಚುವ ತಿಗುಣೆಗಾಗಿ ಮನೆಯ ಸುಟ್ಟವರುಂಟೆ ?

ಎಂದು ಚೆಂದಯ್ಯನನ್ನು ಪ್ರಶ್ನಿಸಿ

ಗುರುಪೂಜೆಯನರಿದೆನೆಂದು ಲಿಂಗಪೂಜೆಯ ಬಿಡಲಾಗದು
ಲಿಂಗಪೂಜೆಯನರಿದೆನೆಂದು ಜಂಗಮಪೂಜೆಯ
ಮರಿಯಲಾಗದು
ಜಂಗಮಪೂಜೆಯನರಿದೆನೆಂದು ಶರಣಸಂಗವ
ಮರಿಯಲಾಗದು
ಇದು ಕಾರಣ ಶರಣ ಸಂಗದ ಸಮ್ಯಗ್ ಜ್ಞಾನದಲ್ಲಲ್ಲದೆ
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು
ಹೋಹ ಬಾರಾ ಚೆಂದಯ್ಯ

ಹೀಗೆ ಅವನನ್ನು ಅನುಭವ ಮಂಟಪಕ್ಕೆ ಕರೆದುಕೊಂಡು ಬರುತ್ತಾನೆ. ಅಲ್ಲಿ ಚೆಂದಯ್ಯ ತನ್ನ ತಪ್ಪನ್ನು ಒಪ್ಪಿ ಇಷ್ಟಲಿಂಗ ಧರಿಸುವಂತಾಗುತ್ತದೆ ಮಾಚಿ ತಂದೆಯ ಕೃಪೆಯಿಂದ. ಕಾಯಕ ನಿಷ್ಠೆ, ಇಷ್ಟಲಿಂಗ ಮಹತ್ವ ಗಮನದಲ್ಲಿಟ್ಟುಕೊಂಡು ರಚಿಸಿರಬಹುದಾದ ಈ ಪ್ರಸಂಗ ಚೆಂದಯ್ಯನ ತಪ್ಪನ್ನು ಎತ್ತಿತೋರಿಸುವುದರ ಮೂಲಕ ಮಾಚಯ್ಯನ ಸತ್ಯ ನಿಷ್ಠೆಯ ಜೊತೆಗೆ ಅಂದು ಕೆಲವರಾದರೂ ಶರಣರು ಇಷ್ಟಲಿಂಗದ ಬಗ್ಗೆ ತಮ್ಮ ಸಂದೇಹ ವ್ಯಕ್ತಪಡಿಸಿರಬೇಕೆಂಬ ಐತಿಹಾಸಿಕ ಅಂಶವನ್ನು ಸಾಬೀತುಗೊಳಿಸುತ್ತದೆ.

ಇನ್ನೊಮ್ಮೆ 'ಬೇಡಿದವರಿಗೆ ಬೇಡಿದುದನಿಲ್ಲೆನ್ನದೀವೆ'– ಎಂಬ ಬಸವಣ್ಣನ ಭಾಷೆ ಹಮ್ಮಿಗೆಡೆ ಮಾಡಿಕೊಟ್ಟಿತು. ತ್ಯಾಗ ವನ್ನು ದಾನದಲ್ಲಿ ಕಂಡ ಬಸವಣ್ಣ ದಾನಮಾಡಿ ತೃಪ್ತಿಗೊಳ್ಳ ಲಿಲ್ಲ. ಇನ್ನೂ ಮಾಡಬೇಕೆಂಬ ಆಶೆ ಆತನದು. ಅದು ಕಾರಣ ಬೇಡುವ ಭಕ್ತರಿಲ್ಲದೆ ಬಡವಾದೆ ಎಂಬ ಉದ್ಗಾರ ಹೊರ ಹೊಮ್ಮುತ್ತದೆ. ಅದು ಮಾಚಿದೇವನ ಕಿವಿಗೂ ಕೇಳಿ ಬಂದಾಗ ಆತ ಕಿವಿ ಮುಚ್ಚಿಕೊಳ್ಳುತ್ತಾನೆ.

ಬಸವನೇಕವಿವೇಕಿಯಾದನು
ಹೊಸತೆನಗೆ ಕಲಿನಾಥ ಇದು ಗ–
ರ್ವಿಸಿದನಕಟಾ ದೀನರಂ ಮಾಡಿದನೆ ಜಂಗಮವ
ವಸುಧೆಯೊಳು ತಾನೀವವಂ ಗಡ
ಹಸನವೈ ನುಡಿ ಈ ನುಡಿಯನಾ
ಲಿಸುವರೇ ಶಿವಭಕ್ತರುಗಳತಿ ದೋಷವಹದಲ್ಲ

(ಬಪು. ೨೧–೪೭)

ಶಿವಶಿವಾ ಇದೇನು ಕೇಳಿದೆ? ಬಸವಣ್ಣ ಎಂಥ ಅವಿವೇಕಿ! ಅಂಥವರಿಗೂ ಹೀಗಾಗಬೇಕೆ? ಶಿವಭಕ್ತರು ಇದನ್ನು ಸಹಿಸಿ ಕೊಳ್ಳುವರೆ!? ಎಂದು ನೊಂದು ನುಡಿದುದನ್ನರಿತ ಬಸವಣ್ಣ ಓಡಿಬಂದು ನಡನಡನಡುಗಿ ಸಾಷ್ಟಾಂಗವೆರಗಿ 'ನಾನು ಭಕ್ತ ನಲ್ಲವಯ್ಯಾ, ನಾನು ವೇಷಧಾರಿಯಯ್ಯ, ಕಾಟುಗ ಕೇತುಗ ಪೋಲುಗನೆಂಬುದು ಎನ್ನ ಹೆಸರು, ಕೂಡಲ ಸಂಗಮದೇವಾ ನಿಮ್ಮ ಶರಣರ ಮನೆಯ ಮಗ ನಾನಯ್ಯ' ಎಂದು ಬಿನ್ನವಿಸಿ ಕೊಂಡ, ಆಗ ಮಾಚಯ್ಯ:

ಎಲವೊ ಅಥವಾ ಕೊಬ್ಬಿದೆಯಲಾ
ಮಲಹರಾರ್ಚಕರಥಮರೇ ನೀ
ಬಲುಧನಿಕನೇ ಬೆಳ್ಪರಿಲ್ಲದೆ ಹೇಂಗೆ ಬಡವಾದ್ಯೆ
ಭಲರೆ ಭಲರೆ ತ್ಯಾಗಿ ಯಾಚಕ
ಕುಲಕೆ ನೀನೊಬ್ಬನೆಯಲಾ ಸರಿ
ಯೊಳರೆ ಚಾಗಿಗಳೆಂತು ನಿನಗೀಕೀಳು ಭುವನದೊಳು

(ಬಪು. ೨೧–೫೪)

'ಎನ್ನ ಮಹಾನುಭಾವರ ಬಡತನದಿರವ ನಿನಗೆ ತೋರುವೆನು' ಎಂದು ಪಾದದಿಂದ ನೀರನ್ನು ಚಿಮ್ಮಲು ಆ ನೀರಹನಿಗಳೆಲ್ಲ ನವರತ್ನಗಳಾದುವಂತೆ ! ಬಸವಣ್ಣ ಹೆಮ್ಮೆ ನೀಗಿ ಕರುಣಿಸೆಂದು ಮಾಚಿತಂದೆಗೆ ಪ್ರಾರ್ಥಿಸುತ್ತಾನೆ. ಆಗ 'ಅಗಸ ಮಲಿನಕ್ಕೆ ಮುಳಿವನಲ್ಲದೆ ವಸ್ತ್ರಗಳಿಗೆ ಮುಳಿವನೆ' ಎಂದು ವಿನಯ, ಶಾಂತಿ, ಇಂದ್ರಿಯನಿಗ್ರಹ, ನಿರ್ವಂಚನೆ, ಸತ್ಯ, ಸ್ಥಿರಬುದ್ಧಿ, ನಿಷ್ಕಪಟತ್ವ, ನಿರಹಂಕಾರ, ಕೈಂಕರ್ಯ, ಭೀತಿ ಕ್ರಮಗಳೇ ಭಕ್ತಿಯ ಲಕ್ಷಣವೆಂದು ಮಾಚಯ್ಯ ಭಕ್ತಿಯ ರಹಸ್ಯವನ್ನರುಹಿ ಬಸವನನ್ನು ಸಮಾಧಾನ ಪಡಿಸುತ್ತಾನೆ.

ಆತನ ನಿರ್ಭೀತ ನಿಷ್ಠುರ ನ್ಯಾಯಪರತೆಗೆ ಪುರಾಣಕಾರರು ಮೇದರ ಕೇತಯ್ಯನ ಪ್ರಸಂಗವನ್ನು ಹೆಣೆದಿದ್ದಾರೆ. ಜಾನಪದ ಕಥನ ಗೀತಕಾರನೂ ಅದನ್ನು ಉಲ್ಲೇಖಿಸಿದ್ದಾನೆ. ಒಂದು ದಿನ ಮೇದರ ಕೇತಯ್ಯ ದಿನನಿತ್ಯದ ಕಾಯಕದಂತೆ ಬಿದಿರು ಬೊಂಬು ಕಡಿಯುವಾಗ ಕೆಳಗೆ ಬೀಳುತ್ತಾನೆ. ಆಗ ಎದೆಯಲ್ಲಿ ಬಿದಿರು ಮೊಳೆ ಮುರಿದು ಶಿವಸನ್ನಿಧಿಯನ್ನು ಸೇರುತ್ತಾನೆ. ಸುಯೋ್ಗ

ದಯವಾಗುತ್ತಲಿ ಆ ಸುದ್ದಿ 'ಬೆಳಕು ಮನೆಮನೆ ಹೊಕ್ಕು ಕಳಕಳಿಯು ಬರುವಂತೆ ತಿಳಿಸುವದೊ' ಎಂಬಂತೆ ಕಲ್ಯಾಣ ವನ್ನೆಲ್ಲ ವ್ಯಾಪಿಸಿತು. ಬಸವಣ್ಣ ಮಾಚಯ್ಯನಿಗೆ ಕರೆಕಳುಹಿಸಿ ದರು. ಶಿವಶರಣರ ಪ್ರಾಣವೇ ತನ್ನ ಪ್ರಾಣವೆನ್ನುವ ಬಸವ ಇನ್ನೂ ಬದುಕುಳಿದಿದ್ದನ್ನು ತಿಳಿದು.

ನಾನು ಬಸವನ ಮುಖವ ಏನು ನೋಡಲಿ ಕೇಳು
ಮಾನವಂತರಿಗೆ ತಮ್ಮೊಡನ । ಪ್ರಾಣೆಂಬ
ತಾನ ಬಿಟ್ಟಿಹನು ಬಸವೇಶ.

ಎನ್ನುತ್ತಾನೆ. ತನ್ನ ತಪ್ಪನ್ನರಿತ ಬಸವ ಕೂಡಲೇ ವಚನ ಪಾಲಿ ಸುತ್ತಾನೆ. ಅವನ ಪ್ರಾಣ ಮೋದರ ಕೇತಯ್ಯನನ್ನು ಹಿಂಬಾಲಿ ಸುತ್ತದೆ. ಈ ನಿಷ್ಠೆಯನ್ನು ಮೆಚ್ಚಿದ ಮಾಚಯ್ಯ ಆಗ:

ಹರನಿಗಾಯಿತೆ ಎದೆಯು ಶರಣರಸುವೊಯ್ಯುದಕೆ
ತಿರುಗುದಿರೆ ಪ್ರಾಣ ಇಬ್ಬರಿಗು । ಈ ಚಣಕೆ
ಹರನ ಉಪ್ಪರಿಗೆ ಉರುಳಿಸುವೆ.

ಎಂದು ಗಣಸಮೂಹದಿಂದ ಶಿವನನ್ನು ಹೊರಗಿಟ್ಟು ಈರ್ವರ ಪ್ರಾಣಗಳನ್ನು ಪಡೆದನಂತೆ ! ಇಂಥ ಮಹಾಮಹಿಮನಿಂದ ನರಲೋಕ ಶಿವಲೋಕವಾಯಿತು.

ಪುರಪುರವ ಭಜಿಸುತಲಿ ಪರಲೋಕ ಪರಸುತಲಿ
ಮೆರೆಸಿದನು ಮಾಚಕಾಯಕವ । ಕಳೆತುಂಬಿ
ನರಲೋಕವಾತು ಶಿವಲೋಕ

ಈ ಕಥೆಯ ಉದ್ದೇಶವಿಷ್ಟೆ ಅನ್ಯಾಯಕ್ಕೆ ಸಾಕ್ಷಾತ್ ದೇವರಾದರೂ ಸರಿ ಮಾಚಿದೇವ ಬಿಡಲಾರ ಪ್ರತಿಭಟಿಸಿ ಜಯಿಸುವ ದಿಟ್ಟ ನಿಲುವು ಅವರದು ಎನ್ನುವುದನ್ನು ಲೋಕಕ್ಕರುಹ ಬೇಕಾಗಿದೆ. ಅವನ ವ್ಯಕ್ತಿತ್ವದ ಹಿನ್ನೆಲೆಯನ್ನರಿತವರಿಗೆ ಈ ಮಾತಿನ ಸತ್ಯಾ ಸತ್ಯತೆ ಗೊತ್ತಾಗುತ್ತದೆ. ಹೀಗೆ ಖಂಡಿತವಾದಿಯಾದ ಮಾಚಿ ಯ್ಯನ ಚಾರಿತ್ರ ನಿಷ್ಕಲಂಕವಾದುದು, ಪುಣ್ಯಮಯವಾದುದು.

೮. ಅನುಭವ ಮಂಟಪದ ಅನುಭಾವಿ

ಅನುಭವ ಮಂಟಪದ ಅನುಭಾವಿಗಳಲ್ಲಿ ಮಡಿವಾಳ ಮಾಚಿದೇವರಿಗೆ ಹಿರಿದಾದ ಸ್ಥಾನವಿದೆ. ಅಂದು ಅಸಂಖ್ಯಾತ ಶಿವಶರಣರು ಸೇರಿ ಕಲ್ಯಾಣದ ಅನುಭವಮಂಟಪದಡಿಯಲ್ಲಿ ಶಿವಾನುಭವ ಸಂಗೋಷ್ಠಿಯನ್ನು ನಡೆಸಿದರು. ಶರಣಸಂಗದಲ್ಲಿ ತಂತಮ್ಮ ನಿಜಾನುಭವದ ಕುಂದುಕೊರತೆಗಳನ್ನು ತಿದ್ದಿಕೊಂಡರು. ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದರು, ದಿಟ್ಟವಾಗಿ ಎದುರಿಸಿದರು. ಸುತ್ತಮುತ್ತಲಿನ ಸಾಮಾನ್ಯರೊಡನೆ ಒಂದಾಗಿ ಬಾಳಿದರು. ಅವರ ನೋವು–ನಲಿವು ಅಜ್ಞಾನಗಳನ್ನು ಕಂಡು ಮರುಗಿದರು, ಕೆರಳಿದರು. ಇವೆಲ್ಲವನ್ನು ಮೆಟ್ಟಿ ಸಾಧನೆಯಿಂದ ಸತ್ಯಸಾಕ್ಷಾತ್ಕಾರ ಮಾಡಿಕೊಂಡರು. ಈ ಎಲ್ಲ ಹಂತಗಳಲ್ಲಿಯ ಅವರ ಅನುಭವ ವಚನರೂಪದಲ್ಲಿ ಹೊರಹೊಮ್ಮಿತು.

ಬಸವಣ್ಣ, ಚೆನ್ನಬಸವಣ್ಣ, ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ, ಘಟ್ಟಿವಾಳಯ್ಯ, ಮಡಿವಾಳ ಮಾಚಯ್ಯ, ಆಯ್ದಕ್ಕಿ ಮಾರಯ್ಯ, ನುಲಿಯ ಚೆಂದಯ್ಯ, ನೀಲಮ್ಮ, ಅಕ್ಕನಾಗಮ್ಮ,

ಮಹಾದೇವಿಯಕ್ಕ, ಲಕ್ಕಮ್ಮ ಇವರೆ ಮೊದಲಾದ ಶರಣ ಶರಣೆಯರು ಮೂರ್ತಿಗೊಂಡು ಈ ಅನುಭಾವ ಸಂಗೋಷ್ಠಿಯಲ್ಲಿ ಭಾಗವಹಿಸಿದವರು. ಅನುಭಾವದ ನಿಲುವನ್ನು ನಿರೂಪಿಸುವ ವಚನಗಳು ಇಲ್ಲಿ ಪ್ರಧಾನವಾಗಿರುವುದರಿಂದ ಆ ನಿಲುವನ್ನು ಪಡೆಯಲು ಸಾಧಕರು ನಡೆಯಬೇಕಾದ ಮಾರ್ಗದ ಸೂಚನೆಯೂ ಅದಕ್ಕಾಗಿ ಅವರನ್ನು ಎಚ್ಚರಿಸುವ ಸುಂದರವಾದ ಉಕ್ತಿಗಳೂ ಇಲ್ಲಿ ಬರುತ್ತವೆ. ಶೂನ್ಯ, ಗುರು, ಲಿಂಗ, ಜಂಗಮ, ಷಟ್ಸ್ಥಲ, ಕಾಯಕ ಮೊದಲಾದ ಮಹತ್ವದ ವಿಷಯಗಳ ಬಗೆಗೆ ನಡೆದ ಸಂಭಾಷಣೆಗಳು ಮನಮುಟ್ಟುವಂತಿದ್ದು ಗಂಭೀರವಾಗಿವೆ. ಈ ಚರ್ಚೆಗಳಲ್ಲೆಲ್ಲ ಮಾಚಿದೇವನ ಪಾತ್ರ ಪ್ರಮುಖವಾಗಿದೆ. ಈತನ ಮಹತ್ವವನ್ನರಿತ ಶೂನ್ಯಸಂಪಾದನೆಕಾರರು ಈತನ ವ್ಯಕ್ತಿತ್ವವನ್ನು ಚಿತ್ರಿಸುವ ಸನ್ನಿವೇಶವನ್ನು ಸಂಪಾದಿಸಿದ್ದಾರೆ. ಅವನ ಅಂತ ರಂಗ ಅನುಭಾವದ ಜೀವಂತ–ಚಿತ್ರವನ್ನು ನಾವು ಇಲ್ಲಿ ಕಾಣ ಬಹುದು.

ಅಲ್ಲಮಪ್ರಭು ಸಿದ್ಧರಾಮನೊಡನೆ ಬಸವಣ್ಣನ ಮಹಾ ಮನೆಗೆ ಬರುತ್ತಿದ್ದಂತೆಯೇ ಮಾಚಯ್ಯ ಆತನ ವ್ಯಕ್ತಿತ್ವಕ್ಕೆ ಮಾರುಹೋಗುತ್ತಾನೆ. ಅನುಭಾವದಿಂದ ಮಾಗಿದ ಮಾಚಿ ದೇವನ ನಡೆನುಡಿಗಳು ಪ್ರಭುವಿನ ಗಮನ ಸೆಳೆಯುತ್ತವೆ. ಪ್ರಭು ಅವನನ್ನು ಒರೆಗೆ ಹಚ್ಚಿ ನೋಡಲು ಬಯಸುತ್ತಾನೆ. ಆ ಪ್ರಸಂಗ ಬರುತ್ತದೆ. ಒಮ್ಮೆ ಚೆನ್ನಬಸವಣ್ಣನ ಮಹಾ ಪ್ರಸಾದ ಬೆಳವಿಗೆಯನ್ನು ಪ್ರಭುದೇವ ಸ್ತುತಿಸುತ್ತಿರುವ ಸಮಯಕ್ಕೆ

ಅಂಗವೆ ಲಿಂಗವಾಗಿ ಲಿಂಗವೆ ಪ್ರಾಣವಾಗಿ
ಜಂಗಮವೆ ಸಂಗವಾಗಿ ಸಂಗವೆ ಸುಸಂಗವಾಗಿ
ಪ್ರಾಣವೆ ಪ್ರಸಾದವಾಗಿ ಪ್ರಸಾದವೆ ಪ್ರಾಣವಾಗಿ
ಇಂತೀ ತ್ರಿವಿಧದಲ್ಲಿ ಸಂಪನ್ನನಾದ
ಸಮತಾಪ್ರಸಾದಿ ಸನ್ನಿಹಿತಪ್ರಸಾದಿ ಸಮಾಧಾನಪ್ರಸಾದಿ
ಕಲಿದೇವಯ್ಯಾ ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೆ.

ಅನ್ನುವ ಮಾಚಿದೇವನತ್ತ ಹರಿಯುತ್ತದೆ ಪ್ರಭುವಿನದೃಷ್ಟಿ. ಪ್ರಭು ಅವನನ್ನು ಇನ್ನೂ ಒರೆಗೆ ಹಚ್ಚುತ್ತಾನೆ. 'ತಲೆಯಲ್ಲಿ ಯುಕ್ತಿ ಮನಸ್ಸಿನಲ್ಲಿ ವಿರಕ್ತಿ ಮಾತಿನಲ್ಲಿ ಭಕ್ತಿಯನ್ನಾಡಿದರೆ ಏನು ಪ್ರಯೋಜನ ? ಗುರು–ಲಿಂಗ–ಜಂಗಮ ಐಕ್ಯತೆ ಸಾಧ್ಯ ವಾಗದು. ಕಾರಣ ಕುಱುಹಿಲ್ಲದ ಕುಱುಹಿನಿಂದ ನಿಜಪದ ಹೇಗೆ ಸಾಧ್ಯ ? ಎನ್ನುವ ಪ್ರಭುವಿಗೆ ಮಾಚಯ್ಯ ತನ್ನನ್ನು ತನ್ನ ನಿಜಾನುಭವವನ್ನು ಸ್ಪಷ್ಟವಾಗಿ ತೋರಿಸಬೇಕಾಗುತ್ತದೆ 'ನಾನಾರು ನನ್ನ ಮೂಲವೇನು ? ನನ್ನ ನಿರ್ಮೂಲವೇನು ? ಮಾನವ ರೂಪದ ಮಡಿವಾಳ ತನ್ನ ನಿಜಮೂಲಕ್ಕೆ ನಡೆದು ಕಂಡ, ಲಿಂಗ ಗಂಭೀರದಲ್ಲಿ ತಾನು ಹುಟ್ಟಿದುದನ್ನು ಮುಂದೆ ನಡೆದು ಹೋಗಿ ತನ್ನ ನಿರ್ಮೂಲವಾದ ಅನಾದಿಯನ್ನು ಕಂಡ. ಅಲ್ಲಿ ತಾನು ಏನು ? ತನಗೆ ಅಲ್ಲಿ ಒಡಲಿಲ್ಲ, ಪ್ರಾಣವಿಲ್ಲ, ಅಹಂಭಾವ ವಿಲ್ಲ ಏನೂ ಇಲ್ಲ. ಏನೂ ಇಲ್ಲದ ಈ ನಿಸ್ಸ್ಥಲಿದ ಶರಣ ಅನಾದಿ. ಅವನ ಶರೀರದಲ್ಲಿ ಬಸವಣ್ಣ ಪ್ರಾಣದಲ್ಲಿ ಚೆನ್ನ ಬಸವಣ್ಣ ಮಹಾಜ್ಞಾನದಲ್ಲಿ ಪ್ರಭು ತುಂಬಿ ಮಾತು ಅದ್ವೈತ

ವಾಗಿರುವುದನ್ನು' ಮಾಚಿತಂದೆ ಅರ್ಥಪೂರ್ಣವಾಗಿ ಭಿನ್ನವಿಸಿ ಕೊಂಡಿದ್ದಾನೆ. ಆಗ ಪ್ರಭುದೇವ:

ಗುರುವಿದು ಲಿಂಗವಿದು ಜಂಗಮವಿದೆಂಬ ಭೇದವ
ಏಕಮಾಡಿ
ನಿನಗೆ ತೋಱಿದವರಾರು ಹೇಳಾ ?
ಆದಿ ಅನಾದಿಯನು ಒಂದು ಮಾಡುವ
ಭಾವ ನಿರ್ಭಾವವನಱಿದವರಾರು ಹೇಳಾ ?
ದೀಕ್ಷೆ ಶಿಕ್ಷೆ ಸ್ವಾನುಭವ ಪರಿಯ ತೋಱಿ
ನಿಜಪದದಲ್ಲಿ ನಿಲಿಸಿದವರಾರು ಹೇಳಾ ?

ಗುಹೇಶ್ವರಲಿಂಗದಲ್ಲಿ ನಿನ್ನ ಆಯತವ ಹೇಳಾ ಮಡಿವಾಳ ಮಾಚಯ್ಯ ? ಎಂದು ಪ್ರಶ್ನೆಗಳ ಸುರಿಮಳೆಯನ್ನೆ ಕರೆಯು ತ್ತಾನೆ. ಇದಕ್ಕೆಲ್ಲ ಅಪ್ರತಿಭನಾಗದ ಮಡಿವಾಳಯ್ಯ–

ಎಲ್ಲಾ ಭೇದಂಗಳನು ಬಸವಣ್ಣ ಮಾಡಿದನು
ಆದಿ ಅನಾದಿಯನು ಬಸವಣ್ಣ ಮಾಡಿದನು
ಸಾಧ್ಯ ಅಸಾಧ್ಯವನು ಬಸವಣ್ಣ ಮಾಡಿದನು
ಲಿಂಗವನು ಜಂಗಮವನು ಬಸವಣ್ಣ ಮಾಡಿದನು
ಎನ್ನ ಸರ್ವಸ್ವಾಯತವನು ಬಸವಣ್ಣ ಮಾಡಿದ ಕಾರಣ
ಆ ಬಸವಣ್ಣನ ನೆನೆನೆನೆದು ಬದುಕಿದೆನು ಕಾಣಾ
ಕಲಿದೇವರದೇವಾ

ಎಂದು ತನ್ನನ್ನು ದೀಕ್ಷಿಸಿ ಶಿಕ್ಷಿಸಿ ನಿಜಲಿಂಗಸ್ಥಳದಲ್ಲಿ ತನ್ನನ್ನು ರಕ್ಷಿಸಿದ ಕರುಣಾಮೂರ್ತಿ ಬಸವಣ್ಣ ಆತನಿಂದ ಎಲ್ಲವನ್ನೂ

ಪಡೆದುಕೊಂಡೆ ಎಂದು ಹೇಳುತ್ತಾನೆ. ಇದರಿಂದ ಬಸವಣ್ಣನೇ ಆತನಿಗೆ ಇಷ್ಟಲಿಂಗವನ್ನು ಕೊಟ್ಟು ಗುರುವಿರಬಹುದೆಂದು ತೋರುತ್ತದೆ ಎನ್ನುತ್ತಾರೆ ಸಂ. ಶಿ. ಭೂಸನೂರಮಠರು.

ಮಾಚಿದೇವ ತನಗೆ ದೊರಕಿದ ಮಹಾಪ್ರಸಾದ ಅರಿವನ್ನು ಹೇಳುತ್ತ ಹೋದಂತೆ ಆತನ ಸಾಧನೆಯ ಎತ್ತರ ಬಿತ್ತರಗಳು ಸ್ಪಷ್ಟವಾಗುತ್ತ ಹೋಗುತ್ತವೆ. ತನ್ನನ್ನು ರೂಪಿಸುವಲ್ಲಿ ಬಸವಣ್ಣನ ಪಾತ್ರ ಪ್ರಮುಖವಾದುದೆಂಬುದನ್ನು ಆತ ಒಪ್ಪಿಕೊಳ್ಳುತ್ತಾನೆ. ಮಾಚಿತಂದೆಯ ಈ ಘನ ಸ್ವಾಯತದ ನೀಳ ನಿಲವಿನ ಪರಿಚಯ ತೀರ ವಿನೂತನ. ಬಸವಣ್ಣನಲ್ಲಿ ಒಮ್ಮೊಡಿದ ಭಾವೋನ್ನತಿಕೆ ಇಷ್ಟಕ್ಕೆ ಬಾಗಿಬೀಗುವುದಿಲ್ಲ. ಆತನ ಕೃಪೆಯಿಂದಲೇ ತನ್ನ ಅರಿವು ಮರಹು ಮಾಯೆ ಕರ್ಮ ತನುಗಳು ಒಂದರಿಂದ ಇನ್ನೊಂದು ತೊಂದರೆಗೀಡಾಗಿರುವುದನ್ನು ತಪ್ಪಿಸಿಕೊಂಡಿರುವುದಾಗಿ ಹೇಳುತ್ತಾನೆ. ಗುರು ಲಿಂಗ ಜಂಗಮದ ಅರಿವನ್ನು ಬಸವಣ್ಣನಿಂದ ಸಾಧ್ಯಮಾಡಿಕೊಂಡ ಮಾಚಿದೇವನಿಗೆ ಪ್ರಭು ತನ್ನ ಪರೀಕ್ಷೆಯಲ್ಲಿ ಇನ್ನೂ ತೇರ್ಗಡೆ ಮಾಡಿಲ್ಲ. 'ತನು ಮನ ಭಾವದಲ್ಲಿ ಗುರುಲಿಂಗ ಜಂಗಮ ಪ್ರತಿಷ್ಠೆಯಾದರೇನು ? ಕಾಲಕರ್ಮ ಮಾಯಾ ಲೇಪವಿಲ್ಲದ ತನುಮನ ಭಾವಲೇಪವಿಲ್ಲದ ಅರಿವು ಮರವು ಸೋಂಕದ ನಿಜತ್ವ ನಿಜಕ್ಕೂ ನಿನಗೆ ಅಳವಟ್ಟಿದೆಯೇ ? ಬಸವಣ್ಣನಿಂದ ನಿನಗೆ ಅರಿವಿನ ಸಂಪೂರ್ಣ ಅನುಭವವಾಗಿದೆಯೇ ?– ಹೀಗೆ ಗುರು ಲಿಂಗ ಜಂಗಮ ಸ್ವಾಯತದ ಕುಜುಹಾಗಿ ತನುಮನ ಭಾವ ಅಳಿದು ಅರಿವು ಮರವುಗಳನ್ನು ಮೀರಿದ ನಿರ್ಲಿಪ್ತ ಸ್ಥಿತಿಯನ್ನು ಪ್ರಶ್ನಿಸಿದ ಪ್ರಭುವಿಗೆ ಮಾಚಯ್ಯ.

ತನುವಿನಲ್ಲಿ ಹೊಜೆಯಿಲ್ಲ ಮನದಲ್ಲಿ ವ್ಯಾಕುಲವಿಲ್ಲ
ಭಾವದಲ್ಲಿ ಬಯಕೆಯಿಲ್ಲ ಅಱುವಿನಲ್ಲಿ ವಿಚಾರವಿಲ್ಲ
ನಿಜದಲ್ಲಿ ಅವಧಾನವಿಲ್ಲ ನಿರ್ಲೇಪಸಂಗದಲ್ಲಿ ಬಿಚ್ಚಿ
ಬೇಱಾಗಲಿಲ್ಲ
ಕಲಿದೇವರದೇವಾ ನಿಮ್ಮಲ್ಲಿ ಬೆರಸಿ ಬೇಱಾಗದಿರ್ದೆನು

ಎಂದು ತನ್ನ ಸ್ವಾಯತ ಶುದ್ಧಿಗಳನ್ನು ಪ್ರಮಾಣ ವಚನದಲ್ಲಿ ಪ್ರತಿಪಾದಿಸಿದ್ದಾನೆ. ಮತ್ತೆ ಇನ್ನೂ ತನ್ನ ಅಂತರಂಗವನ್ನು ಸ್ಪಷ್ಟವಾಗಿ ತೆರೆದಿಡುತ್ತಾನೆ.

ಕಾಯದ ಕರಸ್ಥಲದಲ್ಲಿ ಗುರುಸ್ವಾಯತವ ಮಾಡಿದೆನು
ಕ್ರೋಧದ ನಯನದಲ್ಲಿ ಜಂಗಮಸ್ವಾಯತವ ಮಾಡಿದೆನು
ಲೋಭವಿಲ್ಲದೆ ಪ್ರಸಾದವ ಗ್ರಹಿಸಿದೆನು
ಇಂತೀ ತ್ರಿವಿಧದಲ್ಲಿ ಶುದ್ಧನಾದೆನು ಕಾಣಾ
ಕಲಿದೇವರ ದೇವಾ ನಿಮ್ಮಾಣೆ !

ಹೀಗೆ ಗುರು ಲಿಂಗ ಜಂಗಮ ತ್ರಿವಿಧಗಳಿಂದ ಪರಿಶುದ್ಧಗೊಂಡ ಮಾಚಿದೇವನ ನಿಲುವನ್ನು ಪ್ರಭು ಅರಿತುಕೊಂಡು; ಅದೆಲ್ಲ ನಿಮಗೆ ಸಾಧ್ಯವಾದ ಪರಿಯ ಹೇಳಾ ಎನ್ನುತ್ತಾನೆ. ಕೂಡಲೇ ಮಾಚಿತಂದೆ 'ಎನ್ನ ಅಂತಃಸ್ಥಿತಿಗತಿಯ ಬಸವಣ್ಣ ಬಲ್ಲನಾಗಿ ಆತನಿಂದಲೆನ್ನ ಪರಿಯ ವಿಚಾರಿಸಿ ನೋಡಿ ಎಂದು ಭಿನ್ನಯಿಸು ತ್ತಾನೆ. ಬಸವಣ್ಣನಿಗೋ ಬಲ್ಲಿದನೆನಿಸಿಕೊಳ್ಳುವ ಭಾವವಿಲ್ಲ. ಶರಣಸಂಗ ಸುಖವನ್ನು ಆತನಷ್ಟು ಅನುಭವಿಸಿದವರು ಬಹುಶಃ ಬೇರೊಬ್ಬರಿಲ್ಲ. ಘನಮಹಿಮರ ನಿಲವನರಿಯಲು ನಿಜಕ್ಕೂ

ಒಂದು ಯೋಗ್ಯತೆ ಬೇಕು. ಪ್ರಾಮಾಣಿಕತೆ ಬೇಕು. ಅಂಥವ ವಿಚಾರಾಚಾರಗಳಿಂದ ವಿಶುದ್ಧನಾಗಿರಬೇಕು. ಆ ಶಕ್ತಿ, ಯುಕ್ತಿ ಬರಬೇಕಾದರೆ ಕಾಯದಲ್ಲಿ ಕತ್ತಲೆ ಆತ್ಮದಲ್ಲಿ ಜೀವಕಲೆ ಭಾವ ದಲ್ಲಿ ಮುಟ್ಟು ಮೈಲಿಗೆ ಅಥವಾ ಹೊಲೆ ಇರಬಾರದು. ಇಂಥ ಬಸವಣ್ಣನ ಸದುವಿನಯ ಬಾಯ್ದೆರೆದು ಉತ್ತರ ಹಾಡುತ್ತದೆ 'ನಾನೆಂತು ಬಲ್ಲೆನಯ್ಯಾ ನಿಮ್ಮ ಘನಮಹಿಮರ ನಿಲುವನು ? ನಿಮ್ಮ ಶರಣ ಮಡಿವಾಳ ಮಾಚಿತಂದೆಯ ಘನವ ನೀವೆ ಬಲ್ಲಿರಿ' ಆತ್ಮ ವಿಮರ್ಶೆಯ ಈ ಎತ್ತರದ ನಿಲುವನ್ನು ಹೊಂದಿದ್ದ ರಿಂದಲೇ ಬಸವಣ್ಣನ ಬಗ್ಗೆ ಮಾಚಿದೇವನಿಗೆ ಎಲ್ಲಿಲ್ಲದ ಪ್ರೀತಿ ವಿಶ್ವಾಸ.

ಬಸವಣ್ಣನ ನಡೆಪರುಷ ಬಸವಣ್ಣನ ನುಡಿಪರುಷ
ಬಸವಣ್ಣನ ದೃಷ್ಟಿ ಪರುಷ ಬಸವಣ್ಣನ ಹಸ್ತ ಪರುಷ
ಬಸವಣ್ಣನ ಭಾವ ಪರುಷ ಬಸವಣ್ಣನ ಮನ ಪರುಷ
ತನು ಮನ ಧನವ ಗುರುಲಿಂಗ ಜಂಗಮಕ್ಕೆ
ನಿವೇದಿಸಿದಾತ ಬಸವಣ್ಣನು
ಬಸವಣ್ಣನ ನೆನೆವುದೆ ಲಿಂಗಾರ್ಚನೆ ಬಸವಣ್ಣನ
ನೆನೆವುದೆ ಪರತತ್ವ
ಬಸವಣ್ಣನ ನೆನೆವುದೆ ಕಲ್ಯಾಣವೆನಗೆ
ಕಲಿದೇವಯ್ಯಾ ನಿಮ್ಮ ಶರಣ ಬಸವಣ್ಣನಿಂತಹ
ಮಹಿಮ ನೋಡಯ್ಯ

ಎಂದು ಮನದುಂಬಿ ಹಾಡುತ್ತಾನೆ. ಬಸವಣ್ಣನ ಈ ಪರುಷ ಮಹಿಮೆಯನ್ನು ಸರ್ವಾಂಗ ಮುಖವಾಗಿ ಉಂಡ ಮಡಿವಾಳ ಸಾಮಾನ್ಯನಲ್ಲ. ಆತನೂ ಬಸವಣ್ಣನೇ. ಬಸವಣ್ಣನಿಗೆ ಆವನಲ್ಲಿ ಅಪಾರ ಗೌರವ.

ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ
ಎನ್ನ ಮನವ ನಿರ್ಮಳವ ಮಾಡಿದಾತ ಮಡಿವಾಳ
ಎನ್ನಂತರಂಗವ ಬೆಳಗಿದಾತ ಮಡಿವಾಳ
ಎನ್ನ ಬಹಿರಂಗವ ಬೆಳಗಿದಾತ ಮಡಿವಾಳ
ಕೂಡಲ ಸಂಗಮದೇವಾ ಎನ್ನ ನಿಮಗೆ ಯೋಗ್ಯವ
ಮಾಡಿದಾತ ಮಡಿವಾಳ.

ಎಂದು ಅವನ ಶ್ರೀ ಪಾದಕ್ಕೆ ನಮೋ ನಮೋ ಎಂದು ಬದುಕಿದುದಾಗಿ ಹೇಳಿದ್ದಾರೆ. ಬಸವಣ್ಣನ ತನುಮನ ಶುದ್ಧಮಾಡಿ ಬಾಹ್ಯಾಂತರಂಗಗಳನ್ನು ಬೆಳಗಿ ಯೋಗ್ಯವನ್ನಾಗಿ ಮಾಡಿದ ಅವನ ಯೋಗ್ಯತೆ ಎಂತಹದೆಂಬುದು ಸ್ಪಷ್ಟವಾಗುತ್ತದೆ. ಇದೆಲ್ಲವನ್ನೂ ನೋಡುತ್ತಿದ್ದಂತೆಯೇ ಕೇಳುತ್ತಿದ್ದಂತೆಯೇ ಪ್ರಭುವಿನ ಆನಂದಕ್ಕೆ ಎಣೆಯೇ ಇಲ್ಲ.

ಆದಿಯ ಕಂಡೆ ಅನಾದಿಯ ಕಂಡೆ
ಘನವ ಕಂಡೆ ಮನವ ಕಂಡೆ
ಅನುವ ಕಂಡೆ ಆಯತ ಸ್ವಾಯತ ಸನ್ನಿಹಿತವ ಕಂಡೆ
ಗೋಹೇಶ್ವರ ಲಿಂಗದಲ್ಲಿ ಬಸವಣ್ಣನ ಕೃಪೆಯಿಂದ
ನಿನ್ನ ಕಂಡೆ ಕಾಣಾ ಮಡಿವಾಳ ಮಾಚಯ್ಯ

ಎಂದ ಪ್ರಭು ತನ್ನ ಕಣ್ಣು ಕಂಡು ಕೃತಾರ್ಥವಾದುದನ್ನು ಹೃದಯತುಂಬಿ ಮತ್ತೆ :

ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು
ಅಗ್ನಿಯ ಮುಸುಕ ತೆಗೆದ ಕರ್ಪುರದಂತಾಯಿತ್ತು
ಕತ್ತಲೆಯೊಳಗೆ ಬೆಳಗು ಹೊಕ್ಕಂತಾಯಿತ್ತು
ಗುಹೇಶ್ವರನ ಶರಣ ಮಡಿವಾಳ ಮಾಚಿತಂದೆಯ
ಕೃಪೆಯಿಂದ
ಬಸವಣ್ಣಾ ನಿನ್ನನ್ನೂ ಮಡಿವಾಳನನೂ ನೀನೆಂದೆ
ಕಂಡೆನಯ್ಯಾ

ಆದಿ ಅನಾದಿ ಘನಮನ ಅನು, ಆಯತ, ಸ್ವಾಯುತ ಸಂನಿಹಿತಗಳನ್ನು ಕಂಡು ಕೃತಾರ್ಥನಾದ ಪ್ರಭುವಿಗೆ ಮಡಿವಾಳನಂತಹ ಮಹಾಶರಣನ ಸಂದರ್ಶನವಾಗುತ್ತದೆ. ಯಾವ ನಿಲುವನ್ನು ಒರೆದು ನೋಡಲು ಬಂದಿದ್ದನೊ ಅದು ಕಣ್ಣಮುಂದೆಯೇ ಸಾಕಾರವಾಗಿ ನಿಂತಿದೆ. ಅದಕ್ಕೆ ಪ್ರಭು ಮಣಿಯುತ್ತಿದ್ದಾನೆ. ಸಂಗದಲ್ಲಿ ಶರಣ ಸಂಗವೇ ಚೆಲುವಾಗುತ್ತದೆ. ಅನುಭವ ದಿವ್ಯಾನುಭವವಾಗುತ್ತದೆ. ಬಸವಣ್ಣನ ಭಕ್ತಿ ಮಡಿವಾಳನ ಆಚಾರದಲ್ಲಿ ತುಂಬಿ ಹರಿಯುತ್ತದೆ. ಚೆನ್ನಬಸವಣ್ಣನನ್ನು ತನ್ನ ಜ್ಞಾನಾಂಗದಲ್ಲಿ ತುಂಬಿಕೊಂಡಿದ್ದಾನೆ ಮಾಚಯ್ಯ. ಇಬ್ಬರೂ ಬಸವಣ್ಣನ ಗರುಡಿಯಲ್ಲಿಯೇ ಬೆಳೆದವರು ಆದರೆ ಚೆನ್ನಬಸವಣ್ಣನಿಂದ ನಿರವಯಲ ಪದವನ್ನು ಅನುಗ್ರಹಿಸಿಕೊಳ್ಳಬೇಕೆಂದು ಮಾಚಯ್ಯನ ಆಶೆ.

ಒಂದು ಕೈಯ ಬಯಲ ಎನಗೆ ಕೊಟ್ಟನು
ಒಂದು ಕೈಯ ಬಯಲ ಚೆನ್ನಬಸವಣ್ಣಗೆ ಕೊಟ್ಟನು
ನೀವು ಬಂದಾರೆಂದು ಎಂಟು ಸಾವಿರ ವರುಷ

ಒಗೆದೊಗೆದು ಬಿಳಿದು ಮಾಡುತ್ತಿದ್ದೆನು
ಒಂದು ಬಿಳಿದ ಬಸವಣ್ಣ ನಿನ್ನ ಲಿಂಗಕ್ಕೆ ಕೊಡೆಂದು ಕೊಟ್ಟಡೆ
ಲಿಂಗಕ್ಕೆ ಕೊಡಲೊಲ್ಲದೆ ತಲೆಗೆ ಸುತ್ತಿಕೊಂಡನು
ಮಡಿಯಾ ಕೂಲಿಯು ಬೇಡಿದೊಡೆ
ಬಿಳಿಯು ಹಱಿದು ಎನ್ನ ಮೇಲೆ ಬಿಸಾಟನು
ನೀನುಟ್ಟು ಬೀಳುಡಿಗೆಯು ಚೆನ್ನಬಸವಣ್ಣನ ಕೈಯಲಿ
ನಿರಾಳವನೆನಗೆ ಕೊಡಿಸು ಓ ಪ್ರಭುವೆ ಕಲಿದೇವರದೇವಾ

ಅಲ್ಲಮನನ್ನು ಕುರಿತು ಅರ್ಥವತ್ತಾಗಿ ಹೇಳುವ ಈ ವಚನ ಶ್ರೀ ಜಚನಿ ಅವರು ಹೇಳುವಂತೆ" ಗೂಢವಾಗಿದೆ. ಮಾಚಿ ದೇವನ ಮಹಾನುಭಾವ ಅರಳಿ ಬಯಲಗಲ ಬಳಸಿ ಬಿತ್ತರ ಗೊಂಡಿದೆ. ಶೂನ್ಯ ಸಂಪಾದನೆಯು ಸಂಕೇತವಾಗಿ ಅಲಂಕೃತ ವಾಗಿದೆ. ಬಯಲ ಪಡೆದು ಬಯಲಿಗೆ ಬಯಲಗೊಳಿಸುವ, ಚೆನ್ನಬಸವಣ್ಣನಿಂದ ಆ ಪರಮಾನುಭಾವ ಅನುಗ್ರಹಕೆ ಪಾತ್ರ ವಾಗುವ ಹಿರಿಹಂಬಲ ಹೊನಲಾಗಿ ಹೊಮ್ಮಿದೆ". ಮಡಿವಾಳ ಮಾಚಿತಂದೆಯು ನಿರಾಳ ನಿರ್ಮ್ಮಳ ಹಸಾದದ ಹೆಬ್ಬಯಕೆಯನ್ನು ಮನಗಾಣಿಸುವ ಈ ವಚನ ಮಡಿವಾಳ ಕಾಯಕವನ್ನೇ ಒಂದು ಹೊಸ ಆಯಾಮದಲ್ಲಿ ನಿಲ್ಲಿಸುತ್ತದೆ ಎನ್ನುತ್ತಾರೆ ಡಾ। ಎಚ್, ತಿಪ್ಪೇರುದ್ರಸ್ವಾಮಿ.

ಆದರೆ ಮಡಿವಾಳಯ್ಯನ ಅಪೇಕ್ಷೆಗೆ ಚೆನ್ನಬಸವಣ್ಣ ಕೃತಜ್ಞತೆಯಿಂದ ಹೀಗೆ ಹೇಳುತ್ತಾನೆ. 'ಎಂಥ ಸುದ್ದಿ ನೀವು ಹೇಳುವುದು ? ನೀವು ಅರಿವೆ ತೊಳೆದ ಹೊಳೆಯಲ್ಲಿ ನೀವು

ನಿಂದ ತೋಹಿನಲ್ಲಿ, ನೀವು ಮಾಡಿದ ಮಡಿಯಲ್ಲಿ, ನೀವು ಮಡಚಿದ ಗಳಿಗೆಯಲ್ಲಿ, ನೀವಿದ್ದ ನಿಮ್ಮರವಿನ ಹೊಟ್ಟೆಯಲ್ಲಿ ನರರು ಸುರರು ಮನುಮುನಿ ಯತಿವ್ರತಿಗಳು, ಗಂಗೆಯ ಮಳಲಿನ ಸಂಖ್ಯೆಯ ರುದ್ರರು, ಗಂಗಾಧರ ಗೌರಿವಲ್ಲಭರು ಎಷ್ಟೆಷ್ಟೊ ಮುಖದ ಮಹಾದೇವರು ಮತ್ತೆ ಲೋಕಾದಿ ಲೋಕವೆಲ್ಲ ಅಡಗಿದರು. ನೀವು ಒಗೆದ ಅರುವೆ ನಿಮ್ಮ ಹೊಳೆ ನಿಮ್ಮ ಮಡಿ ನೀವಿದ್ದ ಇರವು ಎಂಥವಿರಬೇಕು, ಮಡಿವಾಳಯ್ಯ ? ಕೂಡಲ ಚೆನ್ನಸಂಗಮದೇವರ ಸಾಕ್ಷಿಯಾಗಿ ನಿಮ್ಮ ನಿರಾಳದ ಪ್ರಸಾದದಿಂದ ನಿರವಯದ ಹಾದಿಯ ಕಂಡೆನಲ್ಲದೆ ನಿಮ್ಮಿಂದಲಾನು ಘನವೆ ಮಡಿವಾಳ ಮಾಚಯ್ಯಾ.

ಈ ಉತ್ತರದಲ್ಲಿ ಇಬ್ಬರ ಶೂನ್ಯಸಂಪಾದನೆಯ ಹಂತವನ್ನು ಸ್ಪಷ್ಟವಾಗಿ ಗುರುತಿಸಿದ ಸಂ. ಶಿ. ಭೂಸನೂರಮಠರು "ನಿರಾಳಕ್ಕೆ ಮುಟ್ಟಿಸುವ ಹಾದಿಯಲ್ಲಿ ಇವರಿಬ್ಬರೂ ಸ್ವಲ್ಪ ಮುಂದು ಸ್ವಲ್ಪ ಹಿಂದು ಇದ್ದಿರಬಹುದು. ಚೆನ್ನಬಸವಣ್ಣನಂತೆ ಮಾಚಯ್ಯನೂ ವಿನಯಶಾಲಿ ಆದರೆ ಖಂಡಿತವಾಗಿ ಸತ್ಯವಾದಿ. ಇವರಿಬ್ಬರೂ ಪ್ರಕೃತಿಯಲ್ಲಿ ಸರಿಸಮ ಎಂದು ಹೇಳಬಹುದು. ಮಹಾಜ್ಞಾನಕ್ಕೆ ನಿರಹಂಕಾರವೇ ಶೃಂಗಾರವಾಗಿದ್ದ ಚೆನ್ನಬಸವಣ್ಣನನ್ನು ಅರಿವಿನಲ್ಲಿ ಅನುಭವಿಸಿ ಕಂಡು ಭಾವದ ತುತ್ತ ತುದಿಯಲ್ಲಿ ಜಂಗಮಮೂರ್ತಿ ಪ್ರಭುವನ್ನು ಕಂಡು ಮತ್ತೆ ಎಲ್ಲ ಶರಣರ ಮಹಾಘನಲಿಂಗದ ಅನುಭವವನ್ನು ಸರ್ವಾಂಗದಲ್ಲಿ ತುಂಬಿಕೊಂಡ ಶ್ರೀಮಂತ ಮಡಿವಾಳ ಮಾಚಯ್ಯ" ಎನ್ನುತ್ತಾರೆ. ಅಂತಹ ನಿಲುವಿಗೆ ಆತ ತನ್ನ ನಿಷ್ಠೆಯಿಂದ ಏರಿದ್ದಾನೆಂಬುದನ್ನು ಮರೆಯಬಾರದು.

೯. ವಚನಕಾರ ಮಡಿವಾಳ :

ಜೀವನದ ಎಲ್ಲ ಹಂತಗಳಲ್ಲಿಯೂ ಬದಲಾವಣೆ ತರುವ ತಮ್ಮ ಧೋರಣೆಗನುಗುಣವಾಗಿ ಶರಣರು ತಮ್ಮ ಸಾಧನೆಯ ಅನುಭವಗಳನ್ನು, ಆದರ್ಶಗಳನ್ನು ಸಮಾಜದ ರೀತಿನೀತಿಗಳನ್ನು ಎಲ್ಲರಿಗೂ ತಿಳಿಯುವ ಮಾತುಗಳಲ್ಲಿ ಹೇಳಬೇಕಾಗಿತ್ತು. ತಮ್ಮ ಅಭಿಪ್ರಾಯಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಪ್ರತಿ ಬಿಂಬಿಸಬೇಕಾಗಿತ್ತು. ಯಾವುದೇ ಸಾಹಿತ್ಯ ಸೃಷ್ಟಿಯನ್ನು ಕಣ್ಣ ಮುಂದೆ ತಂದಾಗ ಅದು ತನ್ನ ಕಾಲದ ಮೌಲ್ಯವನ್ನು ಪ್ರತಿ ನಿಧಿಸುವುದರೊಂದಿಗೆ ತನ್ನ ಧೋರಣೆಗನುಗುಣವಾದ ಹೊಸ ಪ್ರಕಾರವನ್ನು ಮೈಗೂಡಿಸಿಕೊಂಡಿರುತ್ತದೆ. ಹನ್ನೆರಡನೇ ಶತ ಮಾನದ ಶರಣ ಧೋರಣೆಯ ಅನಿವಾರ್ಯ ಅಭಿವ್ಯಕ್ತಿಯಾಗಿ ವಚನಗಳು ಹುಟ್ಟಿಕೊಂಡವು. ವಚನಕಾರರು ಸಾಹಿತ್ಯ ರಚಿಸ ಬೇಕೆಂದು ಹೊರಡಲಿಲ್ಲ. ಅವರಿಗೆ ವಚನಕ್ಕಿಂತ ಮುಖ್ಯ ವಾದುದು ಬದುಕು. ಹೀಗಾದ್ದರಿಂದಲೇ ಅದೊಂದು ಸಹಜ ವಾದ ವಿಶಿಷ್ಟ ಸಾಹಿತ್ಯಪ್ರಕಾರವಾಗಿ ರೂಹುದಳೆಯಿತು ಗಮನ ಸೆಳೆಯಿತು. ಶರಣರು ಮಾಡಿದ ಈ ಹೊಸ ಪ್ರಯೋಗದಿಂದ ಆ ಯುಗದ ಕನ್ನಡಸಾಹಿತ್ಯ ಸ್ವರೂಪವೇ ಬದಲಾಯಿತು.

ಅನುಭಾವಿಯಾದ ಮಾಚಿದೇವ ವಚನಗಳನ್ನು ರಚಿಸಿ ವಚನಕಾರನೆನಿಸಿದ್ದಾನೆ. ಆತ ಕೆಲವು ಕಾಲಜ್ಞಾನವನ್ನು ಬರೆ ದಿರುವುದಾಗಿಯೂ ಗೊತ್ತಾಗುತ್ತದೆ. 'ಮಡಿವಾಳಣ್ಣನ ವಚನ ಮೂರು ಕೋಟಿ ಮುನ್ನೂರು' ಎಂದು ಸಿದ್ಧರಾಮ ಶಿವಯೋಗಿ ಹೇಳುತ್ತಾನೆ. ದುರ್ದೈವದಿಂದ ಈ ಸಾಹಿತ್ಯ ರಾಶಿಯ ಸಮಗ್ರ ದರ್ಶನ ಸಮುಗಾಗುತ್ತಿಲ್ಲ. ಕಲ್ಯಾಣ ಕ್ರಾಂತಿಯ ನಂತರ ವಚನ

ಸಾಹಿತ್ಯ ಒಂದು ದೊಡ್ಡ ವಿಪತ್ತಿಗೆ ತುತ್ತಾಯಿತು. ಶಿವಶರಣರೆಲ್ಲ ನಾಡಿನ ಸುತ್ತೆಲ್ಲ ಚದುರಿಹೋದರು. ಕೆಲವರು ತಮ್ಮೊಂದಿಗೆ ವಚನ ಸಾಹಿತ್ಯವನ್ನು ಕೊಂಡೊಯ್ದರು. ವಚನಗಳೆಲ್ಲ ಚೆಲ್ಲಾಪಿಲ್ಲಿಯಾದವು. ಹಾಗೆ ಚೆಲ್ಲಾಪಿಲ್ಲಿಯಾದ ವಚನಗಳಲ್ಲಿ ಈಗ ಉಳಿದು ಬಂದಿರುವವು ಕೆಲವು ಮಾತ್ರ.

೧೯೩೯ರಲ್ಲಿ ದಿ. ರಾವಬಹದ್ದೂರ ಫ. ಗು. ಹಳಕಟ್ಟಿಯವರು 'ಶ್ರೀ ಮಡಿವಾಳ ಮಾಚಿದೇವನ ವಚನಗಳು' ಎಂಬ ಶೀರ್ಷಿಕೆಯಡಿಯಲ್ಲಿ ನೂರು ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅದರ ಪ್ರಸ್ತಾವನೆಯಲ್ಲಿ ಅವರೆ "ಮಡಿವಾಳ ಮಾಚಿದೇವನ ವಚನಗಳುಳ್ಳ ಸ್ವತಂತ್ರ ಗ್ರಂಥ ಇನ್ನೂ ಉಪಲಬ್ದವಾಗಿಲ್ಲ. ಆದರೆ ಅವು ಅನೇಕ ವಚನ ಸಂಗ್ರಹ ಗ್ರಂಥಗಳಲ್ಲಿ ಉಪಲಬ್ಧವಿರುತ್ತವೆ. ಅವುಗಳನ್ನು ನಾವು ಆಯ್ದು ಒತ್ತಟ್ಟಿಗೆ ಸೇರಿಸಿ ವಿಷಯಾನುಸಾರವಾಗಿ ಹೊಂದಿಸಿ ಈ ಗ್ರಂಥ ರಚಿಸಿರುತ್ತೇವೆ" ಎಂದಿದ್ದಾರೆ. ಈಚೆಗೆ (೧೯೭೫ರಲ್ಲಿ) ದಾವಣಗೆರೆಯ ಎಸ್. ಉಮಾಪತಿಯವರು ಮಡಿವಾಳಯ್ಯನ ವಚನಗಳು" ಎಂದು ೩೪೫ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ಅಲ್ಲಮ, ಬಸವಣ್ಣ ಮತ್ತು ಚೆನ್ನಬಸವಣ್ಣನ ಹೆಸರಿನ ಮರೆಯಲ್ಲಿ ಮರೆಮಾಚಿ ಹೋದ ಮಾಚಿದೇವನ ವಚನಗಳ ಬಗ್ಗೆ ಸ್ಥೂಲವಾಗಿ ನಡೆದ ಕೆಲಸ.

ವಚನ ಸಾಹಿತ್ಯಕ್ಕೆ ಮಾಚಿದೇವನ ಕೊಡುಗೆ ವಿಶಿಷ್ಟವಾಗಿದೆ. ಅನಭಾವದ ನಿಲುವನ್ನು ನಿರೂಪಿಸುವ ಆತನ ವಚನಗಳನ್ನು ಹಿಂದೆ ನೋಡಿದ್ದೇವೆ. ಇಲ್ಲಿನ ಸರಸ ವಚನಗಳಲ್ಲಿ ಮುಮುಕ್ಷುವಾದ ಸಾಧಕ ಕಂಡ ಜೀವನದ ಸನ್ನಿವೇಶಗಳು, ಲೋಕದ ಅಂಕು

ಡೊಂಕುಗಳು. ವ್ಯಕ್ತಿಯ ಗುಣದೋಷಗಳು, ಸಮಾಜದ ಅಸ್ವಾಸ್ಥ್ಯಗಳು ಹೃದಯಂಗಮವಾಗಿ ಮೂಡಿಬಂದಿವೆ. ಮಾಚಯ್ಯನದು ಬಹುಮುಖ ವ್ಯಕ್ತಿತ್ವ. ಆತ ಹಿಡಿದ ಹಾದಿ ನೇರವಾದದ್ದು: ಸರಳವಾದದ್ದು. ಸಾಮಾನ್ಯ ವರ್ಗದಿಂದ ಆತ ಬಂದಿರುವುದರಿಂದ ಎಲ್ಲರ ಮನಸ್ಸನ್ನು ಅವನ ವಚನಗಳು ಮುಟ್ಟಬಲ್ಲವು. ಶಿವಭಕ್ತರು ಮೊದಲು ಶಿವನನ್ನರಿಯಬೇಕು. ಇಲ್ಲದಿದ್ದರೆ ಅವರಿಂದೇನು ಪ್ರಯೋಜನ ?

"ಹುಟ್ಟದ ಬೀಜವಿದ್ದಡೇನು ಧರೆಯೊಳಗೆ? ಅಟ್ಟುಣ ಬಾರದ ಮಡಕೆ ಇದ್ದಡೇನಯ್ಯ ಮನೆಯೊಳಗೆ? ಶಿವ ನಿಮ್ಮ ಮುಟ್ಟದ ಮನವಿದ್ದಡೇನಯ್ಯ ತನುವಿನೊಳಗೆ? ಕೆಚ್ಚಲ ಕಚ್ಚಿದ ಉಣ್ಣೆ ಬಲ್ಲುದೇ ಕ್ಷೀರದ ರುಚಿಯನು? ಬಚ್ಚಲೊಳಗಣ ಬಾಲಹುಳು ಬಲ್ಲುದೇ ನಿಚ್ಚಳದ ನೀರಿನನುಭವ? ನಿಚ್ಚ ನಿಚ್ಚ ಲೋದುವ ಗಿಳಿಬಲ್ಲುದೆ ತನಗೆ ಬಹ ಬೆಕ್ಕಿನ ಬಾಧೆಯ? ಪುಚ್ಚಗೊಂಡ ನಾಯಿಬಲ್ಲುದೆ ಸಾಕಿದೊಡೆಯನ? ಇದು ಕಾರಣ ಒಡಲ ಪಡೆದರೇನು? ಶಿವನೇ ನಿಮ್ಮನರಿಯದ ಮನುಜನ ಒಡಲೆಂಬುದು ಹೊಲೆ ಜೋಗಿಯ ಕೈ ಒಡೆದ ಸೋರೆಯಂತೆ ಕಾಣಾ ಕಲಿದೇವರ ದೇವಾ"

ಇಲ್ಲಿ ಧರೆಯಲ್ಲಿ ಹುಟ್ಟದ ಬೀಜ, ಮನೆಯಲ್ಲಿ ಅಟ್ಟುಣ ಬಾರದ ಮಡಕೆ, ಕ್ಷೀರ ರುಚಿಯನ್ನರಿಯದ ಕೆಚ್ಚಲ ಉಣ್ಣೆ ನಿಚ್ಚಳ ನೀರನ್ನರಿಯದ ಬಚ್ಚಲ ಬಾಲಹುಳು ಮೊದಲಾದ ರೂಪಕಗಳು ಮನಸ್ಸನ್ನು ಸೆರೆ ಹಿಡಿಯುವುದರೊಂದಿಗೆ ಶಿವನನ್ನರಿಯದ ನಮ್ಮ ಮೇಲೆ ಅಚ್ಚಳಿಯದ ಪರಿಣಾಮ ಬೀರುತ್ತವೆ.

ವಚನಕಾರರು ಮೊದಲು ಮಾಡಿದ ಕೆಲಸ ತಮ್ಮ ಆರಾಧ್ಯ ದೈವವನ್ನು ಮಾನವೀಕರಿಸಿದುದು. ಧರ್ಮ ಜಿಡ್ಡುಗಟ್ಟಿದ ಸಮುಯದಲ್ಲಿ ಅವರ ಏಕದೈವೋಪಾಸನೆಯು ಅಂಶ ಎದ್ದು ಕಾಣುವಂತದ್ದು. ಪೃಥ್ವಿಲಿಂಗ, ಅಪ್ಪುಲಿಂಗ, ತೇಜಲಿಂಗ, ವಾಯುಲಿಂಗ, ಆಕಾಶಲಿಂಗ, ಚಂದ್ರಸೂರ್ಯಲಿಂಗ, ಎನ್ನುವ ಭ್ರಮಣೆಯಲ್ಲಿ ಶಿವನ ಲೀಲಾಸಂಚವನರಿಯುದೆ ವಾದಿಸಿ, ಘಾಸಿ ಯಾಗಿ ಕೆಟ್ಟು ಹೋದ ಜನ ಗಂಡನೆಂಜಲಿಗೆ ಹೇಸುವಳು ಮಿಂಡನೆಂಜಲತಿಂಬವಳ ತೆರನಂತೆ, ಮಿಂಡ ಮೈಲಾರ, ಬೀರ, ಭೈರವ, ಏಕನಾಥಿ, ಕುಕ್ಕನೂರ ಬಸದಿ, ಕೇತ, ಧೂಳನೆಂಬ ಕಾಳು ದೈವಕ್ಕೆರಗಿ ನಾನು ಶಿವಭಕ್ತನೆನಿಸಿಕೊಂಬ ಚಂಡಿನಾಯಿ ಗಳು, ಎಂದು ಹೇಸಿ, ರೋಷಿ ನುಡಿಯುವ ಮಾಚಯ್ಯ ಶಿವ ನನ್ನು ದೈವಕ್ಕೆ ಸರಿಗಟ್ಟುವವನ ಬಾಯಲ್ಲಿ ಗೆಜ್ಜೆಯ ಗೂಟು ಗಳನ್ನು ಕಲಿದೇವನನ್ನು ಹುಲುದೈವದೊಂದಿಗೆ ಹೋಲಿಸುವವನ ಬಾಯನ್ನು ಎಡದ ಕಾಲ ಕೆರಹಿಂದ ಬಡಿ ಎನ್ನುವ ಉಗ್ರ ಸ್ವರೂಪ ತಾಳುತ್ತಾನೆ. ಅಂದು ಶುದ್ಧ ಶೈವರು ನಂದಿ, ವೀರ ಭದ್ರ, ದುರ್ಗೆ, ಪಾವುಗೆ, ಕಂಥೆ, ಕಮಂಡಲು ಲಿಂಗಗಳನ್ನು ಪೂಜಿಸುವುದನ್ನು ಮಾಚಿದೇವ ಕಂಡಿದ್ದಾನೆ. ಅಂತಲೇ ಅವರ ಮನೆಯು ಪಾಕ ಅಪೇೇದ್ಯ ಮಾಂಸ ಎನ್ನುತ್ತಾನೆ.

ಭಕ್ತನ ಮನಸ್ಸು ಅಂಧಶ್ರದ್ಧೆಯಿಂದ ಅನೇಕ ದೇವತೆ ಗಳಲ್ಲಿ ಹರಿದು ಹಂಚಿ ಹೋಗಬಾರದು, ಒಂದೆಡೆ ಅವರ ನಿಷ್ಠೆ ನೆಲೆಗೊಳ್ಳಬೇಕು ಎನ್ನುವುದು ಅವನ ಆಶಯು ಅಂತಲೇ. "ಕಾಯುದ ಕಳವಳದಿಂದ ಕರಣದ ಕಳವಳದಿಂದ ಮೋಹದ

ಕಳವಳದಿಂದ ವಿಷಯದ ಕಳವಳದಿಂದ ಮಾಯಾಪಾಶ ಪಾಕುಳ ದಲ್ಲಿ ಜನ್ಮ ಜರೆ ಮರಣಕ್ಕೊಳಗಾದ ಭವಿಗೆ ಅನಂತ ದೈವವಲ್ಲದೆ ಭವರಹಿತ ಸದ್ಭಕ್ತಂಗೆ ಅನಂತದೈವ ಉಂಟೆ ಹೇಳಾ ? ಸೂಳೆಗೆ ಅನಂತ ಪುರುಷರ ಸಂಗವಲ್ಲದೆ ಗರತಿಗೆ ಅನಂತ ಪುರುಷರ ಸಂಗ ಉಂಟೆ ? ಪರಮ ಪಾತಕಂಗೆ ಹಲವು ತೀರ್ಥ ಹಲವು ಕ್ಷೇತ್ರವಲ್ಲದೆ ಪರಮಸದ್ಭಕ್ತಂಗೆ ಉಂಟೆ ? ಹೇಳಾ ಕಲಿದೇವರ ದೇವಾ".

ಎಂದು ಅನಂತ ದೈವೋಪಾಸನೆಯನ್ನು ಖಂಡಿಸುತ್ತಾನೆ.

"ಅಣುರೇಣು ಮಹಾತ್ಮನೆಂಬರು, ಅಣುರೇಣು ತೃಣ ಕಾಷ್ಠದೊಳಗೆ ಇಪ್ಪನೆಂಬರು ಅಮ್ಮೆನಯ್ಯ ನಾನೆಲಮ್ಮೆನಯ್ಯ. ಶರಣ ಸನ್ನಿಹಿತನು ಭಕ್ತಕಾಯ ಮಮಕಾಯನು ದಾಸೋಹ ಪರಿಪೂರ್ಣನು ಸದುಹೃದಯದಲ್ಲಿ ಸಿಂಹಾಸನವಾಗಿ ಅಗಲ ದಿಪ್ಪನು ಕಲಿದೇವಯ್ಯನು" ಹೀಗೆ ಶರಣ ಸನ್ನಿಹಿತ ಭಕ್ತಕಾಯ ಮಮಕಾಯ ಶಿವನಲ್ಲಿ ಮನವಿಟ್ಟ ಶಿವಭಕ್ತ ಎಂತಿರಬೇಕು ಎಂಬು ದನ್ನು ಮಾಚಿದೇವನಿಂದಲೇ ಕೇಳೋಣ.

ನಾವು ಶಿವಭಕ್ತರೆಂದು ಹೇಳುವ ಅಣ್ಣಗಳಿರಾ
ನೀವು ಶಿವಭಕ್ತರೆಂತಾದಿರಿ ಹೇಳಿರಣ್ಣಾ
ಆರುವೈರಿಗಳ ಮುರಿಯ ಕಟ್ಟಿ ಅಷ್ಟಮದವ ತೂರಿ
ಸಪ್ತವ್ಯಸನಂಗಳ ಮುರಿದು ಸದ್ಭಕ್ತಿಯ ನೆಲೆಕಲೆಗಳ ತಿಳಿದು
ಅಷ್ಟಾವರಣಗಳ ಗೊತ್ತುಮುಟ್ಟಿ ನೋಡಿ ಪಂಚಾಚಾರದ
ಭೇದವ ತಿಳಿದು

ಷಡ್ವಿಧ ಲಿಂಗಾಂಗದ ಮೂಲವನರಿದು ಷಡ್ವಿಧ
ಅರ್ಪಿತಾವಧಾನವನಾಚರಿಸಿ
ಷಟ್‌ಸ್ಥಲಮಾರ್ಗವಿಡಿದಾಚರಿಸುವ ಸದ್ಭಕ್ತರಿಗೆ
ಅತಿ ಭೃತ್ಯನಾಗಿ
ಹಮ್ಮುಬಿಮ್ಮುಗಳಿಲ್ಲದೆ ನಡೆನುಡಿ ಸಂಪನ್ನರಾದವರೇ
ಶಿವಭಕ್ತರು ಕಾಣಾ ಕಲಿದೇವರ ದೇವಾ.

ಶಿವಭಕ್ತರಿಗೆ ಶಿವತ್ವ ಸಿದ್ಧಿಸಬೇಕಾದರೆ ಹಮ್ಮುಬಿಮ್ಮುಗಳಿರದೆ ನಡೆನುಡಿ ಸಂಪನ್ನರಾಗಿರಬೇಕು ಎಂದು ತಿಳಿಹೇಳುವ ಆತ್ಮೀಯ ಭಾಷೆ ಮನಮೆಚ್ಚುವಂತಹದು.

ಅಂಗದ ಮೇಲೆ ಲಿಂಗವಿಲ್ಲದವರನ್ನು ಭವಿಗಳೆಂದು ಮಾಚಯ್ಯ ದ್ವೇಷಿಸುತ್ತಿದ್ದನೆಂಬ ಪೊಳ್ಳು ಆರೋಪ ಅವನ ಮೇಲಿದೆ. ಅವನ ದೃಷ್ಟಿಯಲ್ಲಿ ಭವಿಸಂಗ ಯಾವುದು ಎಂಬು ದನ್ನು ಅವನೇ ಹೇಳಿದ್ದಾನೆ.

ತನಗನ್ಯಾಯವಾದುದ ನೋಡಿದಡೆ ಭವಿಸಂಗ
ಸತ್ಯರು ಒಪ್ಪಿದುದನೊಪ್ಪದಿರ್ದೊಡೆ ಭವಿಸಂಗ
ಮಾಡಿಕೊಂಡ ವ್ರತವ ಮೀರಿದಡೆ ಭವಿಸಂಗ
ತಾ ಮಾಡಿದ ಭಕ್ತಿಯನಾಡಿಕೊಂಡಲ್ಲಿ ಭವಿಸಂಗ
ಇಂತಿವನರಿದಡೆ ಸದ್ಭಕ್ತಿ ಕಲಿದೇವರ ದೇವಾ

ಬಹುಶಃ ಇದಕ್ಕಿಂತ ಮನೋಜ್ಞವಾಗಿ ಭವಿತನದ ವ್ಯಾಖ್ಯೆ ಯಾರೂ ಬರೆದಂತೆ ತೋರುವುದಿಲ್ಲ. ಇನ್ನೂ ಮುಂದುವರೆದ ಮಾಚಯ್ಯ ಸದ್ಭಕ್ತಿ ಪ್ರಪಂಚದಲ್ಲಿ ಹೇಗಾಗಿದೆ ಎನ್ನುವ ವಿವೇಚನೆಯ ಮೂಲಕ ಸಮಾಜ ವಿಡಂಬನೆಗೆ ತೊಡಗುತ್ತಾನೆ.

ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು
ಬ್ರಾಹ್ಮಣನ ಭಕ್ತಿ ಮುಟ್ಟುತಟ್ಟಿನಲ್ಲಿ ಹೋಯಿತ್ತು
ಶೀಲವಂತನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು
ಸೆಟ್ಟಿಯ ಭಕ್ತಿ ಕುಟಿಲವ್ಯಾಪಾರದಲ್ಲಿ ಹೋಯಿತ್ತು
ನೀವು ಕೇಳಿರೋ ನೀವು ಕೇಳಿರೊ ಇಂಥವರ
ಭಕ್ತಿಗೆ ಊರಿಂದ ಹೊರಗಣ
ಡೊಂಬನೆ ಸಾಕ್ಷಿ ಕಲಿದೇವರ ದೇವಾ.

ಸದ್ಭಕ್ತನಾದಂಥವ ಹೀಗೆ ವಿವಿಧ ವಿಷಯಗಳಲ್ಲಿ ಹರಿದು ಹಂಚಿಹೋದ ವಿಷಯಗಳ ಬೆನ್ನುಹತ್ತದೆ ನಿರ್ಹೇತುಕಭಾವದಿಂದ ತಲ್ಲೀನನಾಗಬೇಕು.

ಸಿಂಹದ ಮುಂದೆ ಜಿಗಿದಾಟವೇ
ಪ್ರಳಯಾಗ್ನಿಯ ಮುಂದೆ ಪತಂಗದಾಟವೇ
ಸೂರ್ಯನ ಮುಂದೆ ಕೀಟದಾಟವೇ
ನಿಮ್ಮ ಮುಂದೆ ಎನ್ನಾಟವೇ ಕಲಿದೇವರ ದೇವಾ

ಎನ್ನುವ ನಮ್ರ ಭಾವ ಭಕ್ತನಿಗೆ ಅವಶ್ಯಕವಾದುದು. ಎಂಬ ಕಳಕಳಿ ಅವನದು. ಮುಮುಕ್ಷುವಾದ ಮನುಷ್ಯ ಸದ್ಗುರುವಿನ ಕಾರುಣ್ಯ ಪಡೆಯಬೇಕು. "ಘಟದೊಳಗೆ ತೋರುವ ಸೂರ್ಯನಂತೆ ಎಲ್ಲರೊಳಗೆ ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು, ಇರ್ದರೇನು ? ಸರ್ವರಿಗೆ ಸಾಧ್ಯವಲ್ಲ' ಮುಟ್ಟಿ ಮುಟ್ಟದು. ಅದ ಕೊಡುವಡೆ ಗುರುವಿಂದಲ್ಲಾಗದು ಕಾಣಾ ಕಲಿದೇವಾ" ಯೋಗ್ಯನಾದ ಗುರು ತನ್ನನರಸಿ ಬಂದ ಶಿಷ್ಯ ಯೋಗ್ಯನೆನಿಸಿದರೆ ಮಾತ್ರ

ಶಿವದೀಕ್ಷೆ ಕರುಣಿಸಿ, ಅದ್ಯಾತ್ಮ ಮಾರ್ಗದಲ್ಲಿ ಮುನ್ನಡೆಸಬೇಕು. "ಗುರುಶಿಷ್ಯ ಸಂಬಂಧದ ಇರವನಿನ್ನಾರು ಬಲ್ಲರು? ಅದನ್ನು ಹೇಳಬಾರದು ಅನುಭವಿಸಬೇಕು. "ನೆರವಿನ ನೆರವಿಗೆ ಹೇಳ ಲುಂಟೆ ಈ ಮಾತು? ಸ್ತ್ರೀ ಪುರುಷರ ಸ್ನೇಹದ ಕೂಟವ ಮತ್ತೊಬ್ಬರಿಗರುಹಬಾರದು". ಎನ್ನುತ್ತಾನೆ ಮಾಚಿದೇವ.

ಒಮ್ಮೆ ಗುರುಲಿಂಗಜಂಗಮದ ಪಾದೋದಕ ಕೊಂಡ ಬಳಿಕ ಜನನದ ಬೇರ ಕಿತ್ತೊಗೆಯಬೇಕು, ಪ್ರಸಾದವ ಕೊಂಡ ಬಳಿಕ ಪ್ರಳಯವ ಗೆಲಿಯಬೇಕು. ಲಿಂಗವಂತರು ಅದನ್ನು ಸತ್ಯಶುದ್ಧ ಕಾಯಕದಿಂದ ಸಾಧಿಸಬೇಕು. ಇಲ್ಲದಿದ್ದರೆ ನೀವೆಂಥ ಲಿಂಗಾಂಗಿಗಳು ಎಂದು ಪ್ರಶ್ನಿಸುತ್ತಾನೆ ಮಾಚಯ್ಯ.

ಲಿಂಗಾಂಗಿಗಳೆಂದು ನುಡಿವ ಅಪ್ಪಗಳಿರಾ
ಲಿಂಗಾಂಗಿಗಳೆಂತಾದಿರಿ ಹೇಳಿರಣ್ಣಾ
ಅರಿಯದಿರ್ದರೆ ಕೇಳಿರಣ್ಣಾ ಲಿಂಗಾಂಗದ ಭೇದವ
ಪರದೈವವ ನೆನೆಯದೆ ಪರಸ್ತ್ರೀಯರ ಮುಟ್ಟದೆ
ಪರದ್ರವ್ಯವನಪಹರಿಸದೆ ಪರನಿಂದೆಯನಾಡದೆ
ಪರಹಿಂಸೆಗೊಡಂಬಡದೆ ಪರವಾದವ ಕಲ್ಪಿಸದೆ
ಸತ್ಯಶುದ್ಧ ಕಾಯಕ ಮಾಡಿ
ನಿರ್ವಂಚಕತ್ವದಿಂದ ಸಮರ್ಪಿಸಿ ಅತಿಭೃತ್ಯನಾಗಿ
ಆಚರಿಸುವವರೇ ಲಿಂಗಾಂಗಿಗಳು ನೋಡಾ ಕಲಿದೇವರ
ದೇವಾ

ಇದನ್ನೆಲ್ಲ ಅರಿದು ನಡೆದರೆ ಅದೇ ವ್ರತ. ಇಲ್ಲದಿದ್ದರೆ 'ಸುರೆ ಯೊಳಗೆ ತುಂಬಿ ಹೊರಗೆ ಬೂದಿಯ ಪೂಸಿದಂತಾಯಿತ್ತು ಕಲಿ

ದೇವಾ' ಅನ್ನುತ್ತಾನೆ. ಸರ್ವಾರ್ಪಣ ಭಾವಸಾಧಕನಿಗೆ ಆವಶ್ಯಕ. ಅದಕ್ಕಾಗಿ ತನುಮನ ಬಳಸಿ ಗುರುಲಿಂಗ ಜಂಗಮಕ್ಕೆ ದಾಸೋಹ ಮಾಡಬೇಕು. 'ವೀರಶೈವ ಶಿವಯೋಗ ಸಂಪನ್ನನಾಗಿ ಭಕ್ತಿ ಜ್ಞಾನವೈರಾಗ್ಯದಲ್ಲಾಚರಿಸಿ, ಬಕಧ್ಯಾನವನುಳಿದು ರಾಜಹಂಸದ ಹಾಗೆ ಸತ್ಯವನಾಚರಿಸುವ ಭಕ್ತ ಜಂಗಮವೇ ಶಿವನ ಅಪರಾವ ತಾರ ಅವರು ಪುಷ್ಪ ಪರಿಮಳದ ಹಾಗೆ. ಶಿಖಿ ಕರ್ಪೂರದ ಹಾಗೆ, ಉಪ್ಪು ಉದಕದ ಹಾಗೆ ಅಗ್ನಿವಾಯುವಿನ ಹಾಗೆ. ತಿಳಿದುಪ್ಪ ಹೆರೆದುಪ್ಪದ ಹಾಗೆ. ಹೆಪ್ಪು ನವನೀತದ ಹಾಗೆ. ಕಾಲಕಾಮರ ಪಾಶಕ್ಕೆ ಹೊರಗಾಗಿರುತ್ತಾರೆ. ಲೋಕಪಾವನವೇ ಅವರ ಗುರಿ. ಕಾರಣ ಅಂಥವರ ಮನೆಯಂಗಣ ಕಾಯ್ದು, ಅವರುಟ್ಟುದ ತೊಳೆದು, ಅವರೊಕ್ಕುದ ಕೈಕೊಂಡು ಅವರುಗಳ ಹಾರೈಸಿ ಅವರ ಕಡೆಯ ಬಾಗಿಲ ಕಾಯ್ದು ಅವರ ತೊತ್ತಿನ ತೊತ್ತಾಗಿ ಬದುಕಿದೆ ಎನ್ನುವ ಮಾಚಿದೇವ ತನ್ನ ಸಾಧನೆಗೆ ಸಹಾಯಕವಾಗುವ ಶ್ರದ್ಧೆಯನ್ನು ಪುರಸ್ಕರಿಸಿದನೇ ವಿನಃ ಅವಿ ಚಾರ ಅಂಧಶ್ರದ್ಧೆ ಡಂಬಾಚಾರಗಳನ್ನು ತಿರಸ್ಕರಿಸಿದ. ಆಚಾರ ಶುದ್ಧರಾದ ಸದ್ಭಕ್ತ ಗುರುಲಿಂಗ ಜಂಗಮರನ್ನು ಪುರಸ್ಕರಿಸಿದ ಆತ ಜನಮೆಚ್ಚುಗೆಗಾಗಿ ವೇಷವನ್ನು ಧರಿಸಿದ ಆಡಂಬರ ಪ್ರಿಯ ರನ್ನು ಖಂಡತುಂಡವಾಗಿ ಟೀಕಿಸಿದ.

ಸಾಧಕನಾದ ಭಕ್ತಜಂಗಮ ಸಾಮಾಜಿಕ ದೌರ್ಬಲ್ಯಗಳನ್ನು ಪರಿತ್ಯಜಿಸಬೇಕು, ಶೀಲ ಚಾರಿತ್ರಗಳನ್ನು ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಅವನು 'ನಾಯಿಡಗು ನರಮಾಂಸ ಕ್ರಿಮಿಕೀಟನು ಸುರಾಪಾನ ಸೇವಕನಪ್ಪನಲ್ಲದೆ ಭಕ್ತನಲ್ಲ, ಜಂಗಮವಲ್ಲ" ಎಂಬ ಮಾತು ಶರಣಧರ್ಮದಲ್ಲಿ ಅವನಿಗಿರುವ ಅತೀವ ನಿಷ್ಠೆಯನ್ನೇ

ತೋರಿಸುತ್ತದೆ. 'ಲಿಂಗ ಜಂಗ ಪ್ರಸಾದ ಇಂತೀ ತ್ರಿವಿಧಸ್ಥಲವ ನರಿಯದೆ ಉದರವ ಹೊರೆವ ಕೋಟಿ ವೇಷಧಾರಿಗಳೆಲ್ಲಾ ಜಂಗಮರಪ್ಪರೆ?' ಶ್ವಾನ ಸೂಕರಕ್ಕಿಂತ ಕಡೆಯಾದ ಆ ಗಾವಿಲರ ಮಕ್ಕಳನ್ನು ಮನದಲ್ಲಿಯೂ ಭಾವಿಸಬಾರದು ಎನ್ನುತ್ತಾನೆ ಮಾಚಿದೇವ.

ಹೊನ್ನು ವಸ್ತ್ರದವನ ಬಾಗಿಲ ಕಾಯ್ವ ಪಶುಪ್ರಾಣಿಗಳ
ದೇವರೆನ್ನಬಹುದೇನಯ್ಯ?
ಜಗದಕರ್ತನ ವೇಷವಧರಿಸಿಕೊಂಡು ಸರ್ವರಿಗೆ ಬೇಡಿ
ಕೊಟ್ಟರೆ ಒಳ್ಳೆಯವ ಕೊಡದಿರ್ದಡೆ ಕೆಟ್ಟವನು ಪಾಪಿ
ಚಾಂಡಾಲಿ ಅನಾಚಾರಿ
ಎಂದು ದೂಷಿಸಿ ಒಳಹೊರಗೊಂದು ಬೊಗುಳುವ
ಮೂಳ ಮಾನವರಿಗೆ
ಮಹಂತಿನ ಆಚರಣೆ ಎಲ್ಲಿಯದೊ? ಇಲ್ಲವೆಂದ ಕಲಿದೇವ

"ಹೊನ್ನು ಹೆಣ್ಣು ಮಣ್ಣಿನಾಸೆಯಿಂದ ಶಾಸ್ತ್ರೋಪದೇಶ ಹೇಳುವ ಈ ವೇಷಧಾರಿಗಳು ಸೂಳೆಯರಂತೆ ಹೊಟ್ಟೆಗಾಗಿ ಹಿತವಚನ ನುಡಿವವರು. ಇಂತಪ್ಪ ಪ್ರಪಂಚಿನ ವೇಷಡಂಭಕ ಧೂರ್ತ ಲಾಂಛನದಾರಿಗಳಿಗೆ ಮಹಂತಿನ ದೇವರೆನ್ನಬಹುದೆ? ಎನಲಾಗದು ಅವು ಪಶುಪ್ರಾಣಿಗಳು ಎನ್ನುವ ಮಾಚಿದೇವನ ಗದಾಪ್ರಹಾರ ಇಲ್ಲಿಗೇ ನಿಲ್ಲದೆ ವಿರಕ್ತರು, ಪಟ್ಟದೊಡೆಯರುಗಳ ಕಡೆ ತಿರುಗುತ್ತದೆ.

"ಅಯ್ಯಾ ನಾವು ಪರಮವಿರಕ್ತರು ಪಟ್ಟದೊಡೆಯರು ಅತೀತ ಚರಮೂರ್ತಿಗಳೆಂದು ಶಂಖ, ಗಿಳಿಲು, ದಂಡಾಗ್ರವ ಪಿಡಿದು ಕಾವಿಕಾಷಾಯಾಂಬರವ ಹೊದ್ದು, ಮಹಾಘನಲಿಂಗ

ಚರಮೂರ್ತಿಗಳೆಂದು ಚೆನ್ನಾಗಿ ನುಡಿದುಕೊಂಡು ತೊನ್ನ ಹೊಲೆ ಮಾದಿಗರ ಪ್ರಸಂಗಕ್ಕೆ ಮನವೆಳಸದೆ, ಮುಖವೆತ್ತಿ ನೋಡದೆ ಶಬ್ದಮುಗ್ಧವಾಗಿ ಕುಳಿತ ಈ ಶರಣರು ತನ್ನ ತಾನಾರೆಂದರಿಯದೆ ತನ್ನ ಇಷ್ಟಲಿಂಗದ ಗೊತ್ತ ಮುಟ್ಟದೆ, ಪರತತ್ವ ಪ್ರಸಾದ ಮೂರ್ತಿಯಾಗದೆ, ಪೋತರಾಜನಂತೆ ಮೂರು ಮೂರು ಜಡೆ ಮುಡಿ ಗಡ್ಡಗಳ ಬಿಟ್ಟುಕೊಂಡು ಡೊಂಬ ಜಾತಿಕಾರರಂತೆ ವೇಷವ ತೊಟ್ಟು ಸಂಸ್ಕೃತಾದಿ ಶಾಸ್ತ್ರಗಳನ್ನು ಹೇಳುತ್ತ, ಸುಡ ಗಾಡ ಸಿದ್ಧರ ಹಾಗೆ ಯಂತ್ರತಂತ್ರಗಳ ಕಟ್ಟುತ್ತ ಪುರಜನರ ಮೆಚ್ಚಿಸಬೇಕೆಂದು ಕೆರೆ ಬಾವಿ ಮದುವೆ ಮಾಂಗಲ್ಯ ದೀಕ್ಷೆ, ಪಟ್ಟ ಔತಣ ಅನ್ನಕ್ಷೇತ್ರ ದಾಸೋಹ ಪುರಾಣ ಪುಸ್ತಕ ಮಾಡಿಸ ಬೇಕೆಂದು ಗುರುಲಿಂಗ ಜಂಗಮಕ್ಕಲ್ಲದೆ ನಿರಾಭಾರಿ ವೀರಶೈವಕ್ಕೆ ಹೊರಗಾಗಿ ದುರಾಸೆಯಿಂದ ನಾನಾ ದೇಶವ ತಿರುಗಿ ಹುಸಿ ಯಲ್ಲದೆ ನಿರಾಭಾರಿ ವೀರಶೈವಕ್ಕೆ ಹೊರಗಾಗಿ ದುರಾಸೆಯಿಂದ ನಾನಾ ದೇಶವ ತಿರುಗಿ ಹುಸಿಯ ಬೊಗಳಿ ವ್ಯಾಪಾರದ ಮರೆ ಯಿಂದ ನಡು ಊರ ಬೀದಿ ನಡುವೆ ಕುಳಿತು ಪರರೊಡವೆಯ ಅಪಹರಿಸುತ ಸೆಟ್ಟಿ ಮುಂತಾದ ಸಮಸ್ತ ಕಳ್ಳರ ಮಕ್ಕಳ ಕಾಡಿ ಬೇಡಿ, ಅವರು ಕೊಟ್ಟರೆ ಹೊಗಳಿ ಕೊಡದಿರ್ದಡೆ ಬೊಗಳಿ ಆ ದ್ರವ್ಯಗಳ ಕೊಂಡು ಚೋರರೊಯ್ದರೆಂದು ಮಠದೊಳಗೆ ಮಡಗಿಕೊಂಡು ಇರುವ ದುರ್ಗುಣ ದುರಾಚಾರಿಗಳನ್ನು ಜಂಗಮವೆಂದು ಕರೆತಂದು ತೀರ್ಥಪ್ರಸಾದ ತೆಗೆದುಕೊಂಬವ ರಿಗೆ ಇಪ್ಪತ್ತೆಂಟು ಕೋಟಿ ಯುಗ ಪರಿಯಂತರ ನರಕ ಕೊಂಡದಲ್ಲಿ ಕ್ಕುವ ಕಾಣಾ ನಮ್ಮ ಶರಣ ಕಲಿದೇವರ ದೇವಾ".

ಹೀಗೆ ಆತ ಸದ್ಭಕ್ತ, ಶುದ್ಧವೀರ, ಮಹೇಶ್ವರ, ಮಹಂತರು ಪರಮವಿರಕ್ತ, ಪಟ್ಟದೊಡೆಯ, ಶುದ್ಧಶೈವ ಎಂದು ಸಮಾಜದ ಡಂಭ ಪ್ರಮುಖರನ್ನು ಖಂಡಿಸಿದ್ದಾನೆ. ಭಾಷೆ ಒರಟು ಯೆನಿಸಿ ದರೂ ಅಂದಿನ ಜಡ ಸಂಪ್ರದಾಯಕ್ಕೆ ಸಾಮಾನ್ಯರನ್ನು ಗುರಿ ಯನ್ನಾಗಿಟ್ಟುಕೊಂಡ ಅವನ ಧೋರಣೆಗೆ ಅದು ಅಗತ್ಯವಾಗಿತ್ತು. ಅದರೊಂದಿಗೆ ಮೇಲುವರ್ಗದಿಂದ ಬಹುಕಾಲ ದಮನಕ್ಕೊಳ ಗಾಗಿರಬಹುದಾದ ಆತ ಜಾಗ್ರತಗೊಂಡಾಗ ಹಿಂದಿನ ಕಹಿ ಹೀಗಾಡಿಸಿರಬಹುದೇ ಎಂಬ ಸಂಶಯವೂ ನುಸುಳದಿರದು.

ಮಡಿವಾಳನ ನಾಲಗೆ ಹರಿತವಾದದ್ದು. ತನಗನ್ನಿಸಿದ್ದನ್ನು ಅವನ ನಿರ್ದಾಕ್ಷಿಣ್ಯವಾಗಿ ಹೇಳದೆ ಬಿಡಲಾರ. ವೇದ, ಶಾಸ್ತ್ರ, ಪುರಾಣ, ಆಗಮ, ತರ್ಕವ್ಯಾಕರಣಾದಿಗಳ ಕಸರತ್ತು ಭಕ್ತಿ ಲಂಪಟರ ಭೋಗಕ್ಕಾಗಿ ಮಾತ್ರ. ತನ್ನೊಳಗನರಿದ ಅನು ಭಾವಿಗೆ ಅವೆಲ್ಲ ಅಂಗದ ಮೇಲೆ ಲಿಂಗವಿಲ್ಲದಂತೆ !

ವೇದ ವಿಪ್ರರ ಭೋದೆ ಶಾಸ್ತ್ರ ಸಂತೆಯ ಮಾತು
ಪುರಾಣ ಪುಂಡರ ಗೋಷ್ಠಿ
ಆಗಮ ಅನೃತದ ನುಡಿ
ತರ್ಕವ್ಯಾಕರಣ ಕವಿತ್ವ ಪ್ರೌಢಿ
ಇಂತಿವರಂಗದ ಮೇಲೆ ಲಿಂಗವಿಲ್ಲದ ಭಾಷೆ
ಇದು ಕಾರಣ ತನ್ನೊಳಗನರಿದ ಅನುಭಾವಿಯಿಂದ
ಘನವಿಲ್ಲೆಂದ ಕಲಿದೇವಾ

ಶರಣರಿಗೆ ಬರೀ ಬೌದ್ಧಿಕ ಜ್ಞಾನ ಮುಖ್ಯವಲ್ಲ. ಅದರೊಂದಿಗೆ ಕ್ರಿಯೆ ಬೇಕು. ಪರಮಾತ್ಮನನ್ನು ಜ್ಞಾನಕ್ರಿಯೆಗಳಿಂದ ಸಾಕ್ಷಾ ತ್ಕರಿಸುವುದೇ ಎಲ್ಲಕ್ಕೂ ಶ್ರೇಷ್ಠ ಮಾರ್ಗ.

ಅರಿವನರಿದೆನೆಂದು ಕ್ರಿಯೆಯ ಬಿಡಬಾರದು
ಮಧುರಕ್ಕೆ ಮಧುರ ಒದಗುಲಾಗಿ ಸವಿಗೆ ಕೊರತೆಯುಂಟೆ
ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನಕ್ಕೆಡೆಯುಂಟೆ
ನೀ ಮಾಡುವ ಮಾಟ ಶಿವಪೂಜೆಯ ನೋಟಭಾವ
ವಿರಬೇಕು

ಅಂದಾಗ ಎಲ್ಲವೂ ಶಿವಮಯವಾಗುತ್ತದೆ, ಕಲಿದೇವರ ದೇವಯ್ಯನ ಕೂಟವಾಗುತ್ತದೆ. ಈ ಸ್ಥಿತಿ ಅಳವಡಬೇಕಾದರೆ ಮನುಷ್ಯನ ಸಂಕುಚಿತ ಭಾವವಳಿದು ವಿಶ್ವಾತ್ಮನ ದರ್ಶನವಾಗಬೇಕು. ಆಗ ಆತ್ಮ ಸುಖ ಮುಕ್ತಿ ಸಾಧ್ಯ. ಇಂಥದಕ್ಕಾಗಿ ನಾವು ವ್ರತನಿಯಮಗಳನ್ನು ರೂಢಿಸಿಕೊಳ್ಳಬೇಕೇ ವಿನಃ ನಾಲಗೆಯ ರುಚಿಗಾಗಿ, ದೇಹ ಸೌಖ್ಯಕ್ಕಾಗಿ ಏರ್ಪಡಿಸಿಕೊಳ್ಳಬಾರದು. ಅದು ಶರಣ ಧರ್ಮಕ್ಕೆ ಸಲ್ಲ.

ಬಹುಜಲಮಂ ಬಿಟ್ಟು ಚಿಲುಮೆಯ ತೆಗೆದರೆ
ಅದು ನೆಲಶುದ್ಧ ಸೌಕರ್ಯವಲ್ಲದೆ ಅವು ಶೀಲವಲ್ಲ
ಉಪ್ಪು ಬಿಟ್ಟು ಸಪ್ಪೆಯನುಂಡರೆ ಅದು ವನುದ ಹೇಸಿಕೆಯಲ್ಲದೆ
ದೃಢವ್ರತವಲ್ಲ ವ್ರತನಿಶ್ಚಯವಾದರೆ ಪರಸ್ತ್ರೀ
ಪರಧನ ಪರ ದೂಷಣೆಯನ್ನರಿತು ಬಿಟ್ಟರೆ
ಅರವತ್ತಾರು ವ್ರತಗಳಿಗೆ ಕಡೆ ಎಂದ ಕಲಿದೇವರ ದೇವಾ.

ಹೀಗೆ ಜೀವನದ ಪರಮ ಧ್ಯೇಯ ಸಾಧನೆಯನ್ನು ರೂಢಿಸಿಕೊಂಡು ಶರಣ ಮುಕ್ತಿಪಥದಲ್ಲಿ ಮುನ್ನಡೆಯಬೇಕು. ಲೋಕದ ಸ್ತುತಿ ನಿಂದೆಗಳಿಗೆ, ಎಡುರತೊಡರುಗಳಿಗೆ ಹೆದರದೆ ಬೆದರದೆ ತನ್ನ ಕರ್ತವ್ಯವನ್ನು ಪಾಲಿಸಬೇಕು. ಏನು ಮಾಡಿದರೂ

ಹೆಸರಿಡುವ ಈ ಪ್ರಾಪಂಚಿಕ ನೀತಿಯನ್ನು ಮಾಚಿದೇವ ಸೊಗಸಾಗಿ ಚಿತ್ರಿಸುತ್ತಾನೆ.

ಉಂಡರೆ ಭೂತನೆಂಬರು ಉಣದಿರ್ದಡೆ ಚಕೋರಿಯೆಂಬರು
ಊರೊಳಗಿರ್ದಡೆ ಸಂಸಾರಿಯೆಂಬರು ಅಡವಿಯೊಳಗಿರ್ದಡೆ
ಮರ್ಕಟನೆಂಬರು
ಮಾತನಾಡಿದರೆ ಪಾಪಕರ್ಮಿಯೆಂಬರು ಮಾತನಾಡ-
ದಿರ್ದಡೆ ಮುಸುಕಕರ್ಮಿಯೆಂಬರು
ಮಲಗದಿರ್ದಡ ಚೋರನೆಂಬರು ಮಲಗಿರ್ದಡೆ
ಜಡದೇಹಿಯೆಂಬರು
ಇಂತೀ ವಸುಧೆಯೊಳಗೆ ಏಂಟು ವಿಧವ ಕಳೆಯಲಿಳವಲ್ಲ
ಕಾಣಾ ಕಲಿದೇವರ ದೇವಾ.

ಸಾಧಕ ಇಂತವರಲ್ಲಿಯೇ ಮುಂದುವರೆದು ಶಿವಜ್ಞಾನವನ್ನರಿಯಬೇಕು. ಶಿವಜ್ಞಾನ ಬೇರಯವರು ಕಲಿಸಿಕೊಡುವಂತದ್ದಲ್ಲ ಅದು ಸ್ವಭಾವಸಿದ್ಧವಾಗಿ ಬರಬೇಕು, ಪ್ರಕೃತಿನಿಷ್ಟವಾಗಿರಬೇಕು.

ವಾಯುಗುಣ ಸರ್ಪ ಬಲ್ಲುದು ಮಧುರ ಗುಣವ
ಇರುವೆ ಬಲ್ಲುದು
ಗೋತ್ರದ ಗುಣವ ಕಾಗೆ ಬಲ್ಲುದು ಕಾಲದ ಗುಣವ
ಕೋಳಿ ಬಲ್ಲುದು
ಇದು ಕಾರಣ ಮನುಷ್ಯ ಜನ್ಮದಲ್ಲಿ ಬಂದು
ಶಿವಜ್ಞಾನವನ್ನರಿಯದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕಾಣಾ
ಕಲಿದೇವರ ದೇವಾ

ಇಲ್ಲಿ ಪ್ರಕೃತಸಿಷ್ಠ ಸ್ವಭಾವ ಪಡೆದ ಸರ್ಪ. ಇರುವೆ. ಕಾಗೆ, ಕೋಳಿಗಳ ದೃಷ್ಟಾಂತ ಮಾರ್ಮಿಕವಾಗಿದೆ.

ಹೀಗೆ ಸಹಜ ಶಿವಜ್ಞಾನವಸ್ಸರಿತ ಆತ ತನ್ನ ಕಾಯಕದಲ್ಲಿಯೇ ಇದ್ದುಕೊಂಡು ಮುನ್ನಡೆದು ಶರಣನಾದವ, ಶರಣಧರ್ಮದಲ್ಲಿ ಆತನಿಗಿರುವ ಕಳಕಳಿ ನಿಷ್ಠೆ ಅಗಾಧವಾದುದು. ಶರಣಧರ್ಮದ ರಹಸ್ಯವನ್ನು ಒಂದು ವಚನದಲ್ಲಿ ಹೃದ್ಯವಾಗಿ ಮೂಡಿಬಂದಿದೆ.

ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ
ನೀವು ಶರಣರಾದ ಭೇದವ ಹೇಳಿರಿ ಅರಿಯದಿರ್ದಡೆ ಕೇಳಿರಿ
ತನುವಿನಾಕಾಂಕ್ಷೆಯ ಸುಟ್ಟುರುಹಿ ಮನದ
ಲಜ್ಜೆಯ ಮರೆದು
ಭಾವದ ಕ್ರಿಯೆಯ ಹೊಟ್ಟು ಮಾಡಿ ತೂರಿ
ಸದ್ಭಕ್ತಿಯ ನಿಜನಿಷ್ಠೆಯ ತಿಳಿದು
ಸತಿಸುತರಿಗೆ ಸದಾಚಾರ ಸನ್ಮಾರ್ಗವ ತೋರಿ
ನಿರ್ವಂಚಕದಿಂದ ಆಚರಿಸಬಲ್ಲಾತನೇ
ಅಚ್ಚ ಶರಣ ನೋಡಾ ಕಲಿದೇವರ ದೇವಾ

ಇದು ಆತ ನಡೆದು ಇತರರಿಗೆ ತೋರಿಸಿದ ಶರಣಮಾರ್ಗ. ಶರಣಮಾರ್ಗದ ಕೊನೆಯ ಗುರಿ ಸಾಮರಸ್ಯ. ಮಾತಿಗೆ ಮೀರಿದ ಆ ನಿಲುವನ್ನು ಮಾತಿನಲ್ಲಿ ಹಿಡಿದಿಡುವ ಸಾಹಸ ಈ ಅನುಭಾವದ ಅಭಿವ್ಯಕ್ತಿಯಲ್ಲಿದೆ.

ತನುನಷ್ಟ ಮನನಷ್ಟ ನೆನಹುನಷ್ಟ
ಭಾವನಷ್ಟ ಜ್ಞಾನನಷ್ಟ

ಇಂತೀ ಪಂಚದೊಳಗೆ ನಾ ನಷ್ಟವಾದೆನು
ಆ ನಷ್ಟದೊಳಗೆ ನೀ ನಷ್ಟವಾದೆ
ಕಲಿದೇವರ ದೇವನೆಂಬ ನುಡಿ
'ನಿಃಶಬ್ದ ಬ್ರಹ್ಮಮುಚ್ಯತೇ'

ಹೀಗೆ ಎಲ್ಲವೂ ನಷ್ಟವಾದಾಗ ಮೌನವೇ ಬ್ರಹ್ಮಸ್ವರೂಪ ನಿಃಶಬ್ದವೇ ಪರಾತ್ಪರವು. ಈ ನಿಃಶಬ್ದ ನಿಲುವಿಗೇರಿದ ಮಾಚಿ ತಂದೆ ಎಲ್ಲವನ್ನೂ ಅಳಿದು ನಿಜವುಳಿದು ಕಲಿದೇವರ ದೇವನಲ್ಲಿ ಒಂದಾಗಿದ್ದಾನೆ.

ಅವನ ವಚನ ಸಾಹಿತ್ಯದುದ್ದಕ್ಕೂ ಕಣ್ಣಾಡಿಸಿದರೆ ಅನುಭಾವದಿಂದ ಕೂಡಿದ ಕೆಲವು ವಚನಗಳು ಪಾಂಡಿತ್ಯಪೂರ್ಣ ಶೈಲಿ ಹೊಂದಿದ್ದನ್ನೂ ಕೆಲವು ಸಾಮಾಜಿಕ ಸಮಸ್ಯೆಗಳಿಂದ ಸ್ಫೂರ್ತಿಗೊಂಡು ಸರಳ ಶೈಲಿಯಲ್ಲಿ ರಚಿತಗೊಂಡದ್ದನ್ನೂ ಕಾಣಬಹುದಾಗಿದೆ. ವಚನಗಳಲ್ಲಿ ಅಲ್ಲಲ್ಲಿ ಸ್ಮೃತಿ, ಪುರಾಣಾದಿಗಳಿಂದ ಪ್ರಮಾಣವಾಕ್ಯಗಳನ್ನುದ್ಧರಿಸುವುದರಿಂದ ಆತ ವಿದ್ವಾಂಸನೂ ಆಗಿದ್ದನೆಂದು ತಿಳಿಯುತ್ತದೆ. ಭಾವಪೂರಿತವೂ ಅರ್ಥಬೋಧಕವೂ ಆದ ಅವನ ವಚನಗಳು ಉಪಮೆ, ರೂಪಕ, ದೃಷ್ಟಾಂತಗಳಿಂದ ಮನಸ್ಸನ್ನು ಸೆರೆಹಿಡಿಯುತ್ತವೆ. ಒಂದು ಕಾಲದ ಸಮಾಜದ ಅಗತ್ಯ ಮಾಧ್ಯಮವಾಗಿ ಮೂಡಿಬಂದ ಈ ವಚನಗಳು ಕೆಳವರ್ಗ ಸಮಾಜದ ಜನರ ಮನಸ್ಸನ್ನು ಮುಟ್ಟಿ ಎಚ್ಚರಿಸಿದವು. ಸಾಮಾನ್ಯರ ಧ್ವನಿ ಪ್ರತಿಧ್ವನಿಯಾಗಿ ಮಾಚಯ್ಯನಂತವರು ಕಲ್ಯಾಣ ಪಟ್ಟಣದಲ್ಲಿ ತಲೆಯೆತ್ತಿ ಮೆರೆಯುವಂತೆ ಮಾಡಿದ್ದು ಈ ವಚನಗಳೇ. ತಾನು ಬದುಕುವ ಪರಿಸರದಲ್ಲಿ

ತನಗಿರಬಹುದಾದ ಸಂಪರ್ಕಗಳಿಂದ ಸಾಮಾನ್ಯವರ್ಗದ ಮಾಚಯ್ಯ ಕೆಳವರ್ಗದ ಆಶೋತ್ತರಗಳನ್ನು ಹೇಳುವಲ್ಲಿ ಹೆಚ್ಚು ಜೀವಂತ ವಾಗಿ ಕಾಣುತ್ತಾನೆ. ಇಲ್ಲೆಲ್ಲ ಅವನ ಹೇಳಿಕೆ ನಿರ್ದಿಷ್ಟ, ನೇರ ಮತ್ತು ಖಂಡತುಂಡವಾದದ್ದು. ಅಂಧಶ್ರದ್ಧೆ, ಬರಡು ಸಂಪ್ರ ದಾಯ, ಅವಿಚಾರಗಳನ್ನು ಖಂಡಿಸುವಾಗ ಉಗ್ರಸ್ವರೂಪ ತಾಳುವ ಮಾಚಯ್ಯ, ಶರಣ ತತ್ತ್ವಗಳನ್ನು ಪ್ರತಿಪಾದಿಸುವಾಗ ತಾಯಿಯ ಮಮತೆಯಂತೆ ಆತ್ಮೀಯನಾಗುತ್ತಾನೆ, ಶಾಂತ ನಾಗುತ್ತಾನೆ.

ಅವನ ವಚನಗಳನ್ನು ಅರ್ಥೈಸಲು ಹೆಚ್ಚಿನ ವಿದ್ಯಾಭ್ಯಾಸ ಬೇಕಿಲ್ಲ. ನೇರವಾಗಿ ಸಾಮಾನ್ಯನೊಂದಿಗೆ ಬದುಕನ್ನು ಮಾಡಿದ ಈ ಬರಹಗಳು ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯನ್ನು ಪೂರೈಸಿವೆ. ಕಾವ್ಯದ ದೃಷ್ಟಿಯಿಂದ ಕೆಲವೊಂದು ಭಾಗ ನಿರಸ ವಾಗಿ ಕಾಣಬಹುದು. ಶರಣಧರ್ಮದ ಧೋರಣೆಯಿಂದ ಅವು ಗಳಿಗೆ ಅವರದೇ ಆದ ಮನ್ನಣೆ ಇದ್ದೇ ಇದೆ. ಹಾಗೆ ನೋಡಿ ದರೆ ಸಾಮಾಜಿಕ ಧಾರ್ಮಿಕ ಆಂದೋಲನದ ಫಲವಾಗಿ ಮೂಡಿ ಬಂದ ವಚನ ಸಾಹಿತ್ಯದಲ್ಲಿ ಇಂಥ ವಚನ ಮುಖ್ಯ, ಅಮುಖ್ಯ ಎಂದು ವಿಂಗಡಿಸಲು ಬರುವುದಿಲ್ಲ. ತನ್ನ ಸಮಕಾಲೀನವಾಗಿ ಆಲೋಚಿಸುವುದರಿಂದ ಬದುಕಿನ ಸಮಸ್ಯೆಗಳಿಗೆ ಮುಖ ಮಾಡು ವುದರಿಂದ ಇಲ್ಲಿಯ ವಚನಗಳಲ್ಲಿ ಹೆಚ್ಚು ಜೀವಂತಿಕೆ ಕಾಣ ಬರುತ್ತದೆ. ಈ ದೃಷ್ಟಿಯಿಂದ ಮಾಚಿದೇವನ ವಚನಗಳು ಅಭ್ಯಾಸಕ್ಕರ್ಹವಾಗುತ್ತವೆ. ವಚನ ಸಾಹಿತ್ಯ ಉದ್ಯಾನದಲ್ಲಿ ತಮ್ಮದೇ ಆದ ಕಂಪನ್ನು ಬೀರುತ್ತವೆ. ಸಹಜ ಸುಂದರವಾದ

ಆತನ ಕೆಲವು ಮಾತುಗಳು ಅನುಭಾವದ ಅಚ್ಚಿನಲ್ಲಿ ಶ್ಲೋಕಬದ್ಧವಾಗಿ ಹೇಗೆ ರಚನೆಗೊಂಡಿವೆ ಎಂಬುದನ್ನು ಇಲ್ಲಿ ನೋಡಬಹುದು.

ಅರಿದು ಆಚರಿಸಬಲ್ಲಾತನೆ ನಿಚ್ಚ ಶರಣ
ಮಹಾಜ್ಞಾನಕ್ಕೆ ನಿರಹಂಕಾರವೇ ಶೃಂಗಾರ
ಕೆಚ್ಚಲ ಕಚ್ಚಿದ ಉಣ್ಣಿ ಬಲ್ಲುದೇ ಕ್ಷೀರದ ರುಚಿಯ
ಆಡಿ ತೋರ್ಪುದಾ ಅಜ್ಞಾನ ಆಡದೇ ಮಾಳ್ಪುದು
ಮಹಾಜ್ಞಾನ
ಘೂಕ ರಾತ್ರಿಯೆಂದಡೆ ಲೋಕ ದೀಪವ ಹೊತ್ತಿಸುವುದೆ
ಕಚ್ಚುವ ತಿಗುಣೆಗಾಗಿ ಮನೆಯ ಸುಟ್ಟವರುಂಟೆ
ಅರಿವನರಿದೆನೆಂದು ಕ್ರಿಯೆಯ ಬಿಡಬಾರದು
ಗರಿಯ ಕಟ್ಟಿದ ಕೋಲು ಗುರಿಯ ತಾಗಬಲ್ಲುದೆ
ಮಾಡೆನೆಂಬ ನೇಮ ಬೇಡ ಮಾಡಿಹೆನೆಂಬ ಕೃತ್ಯಬೇಡ
ಅರಸನ ಕಂಡು ಪುರುಷನ ಮರೆವಂತೆ
ಅರಸನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು
ಶಿವ ನಿಮ್ಮ ಮುಟ್ಟದ ಮನವಿದ್ದಡೇನಯ್ಯ
ತನುವಿನೊಳಗೆ
ಗಂಡನೆಂಜಲಿಗೆ ಹೇಸುವಳು ಮಿಂಡನೆಂಜಲ ತಿಂಬವಳ
ತೆರನಂತೆ
ಸೂರ್ಯನ ಮುಂದೆ ಕೀಟದಾಟವೆ

೧೦. ಶರಣರು ಕಂಡ ಮಡಿವಾಳ:

ಕಲ್ಯಾಣದ ಶರಣರಲ್ಲಿ ಮಡಿವಾಳ ಮಾಚಿದೇವ ಎದ್ದು ತೋರುವ ವ್ಯಕ್ತಿತ್ವ ಪಡೆದಿದ್ದಾನೆ. ತನ್ನ ಕಾಯಕ ನಿಷ್ಠೆಯಲ್ಲಿ

ಬಟ್ಟೆಗಳನ್ನು ಶುಚಿಗೊಳಿಸಿದಂತೆ ಶರಣ ಸಂಗದಲ್ಲಿದ್ದು ಜನ ಮನದ ಕೊಳ್ಳೆಯನ್ನು ತೊಳೆಯುವ ಕೆಲಸ ಮಾಡಿದ್ದಾನೆ. ಅನ್ಯಾಯದೊಂದಿಗೆ ಎಂದಿಗೂ ಸಂಧಾನ ಮಾಡಿಕೊಳ್ಳದ ಧೀರ ನಿಲವು ಆತನ ವ್ಯಕ್ತಿತ್ವದ ವೈಶಿಷ್ಟ್ಯ. ಆತನ ಮಹತಿಯನ್ನು ಬಹುಬೇಗನೆ ಅರಿತ ಪ್ರಭು ಮೊದಲಾದ ಶರಣರೆಲ್ಲಾ ಬಸವಣ್ಣನವರ ಸಮಸ್ಥಾನದಲ್ಲಿ ಮಾಚಯ್ಯನನ್ನು ಕಂಡಿದ್ದಾರೆ. ಚೆನ್ನ ಬಸವಣ್ಣ :

"ಪ್ರಭುದೇವರ ಅಪರಿಮಿತಾರೋಗಣೆಗೆ
ಬಸವಣ್ಣ ಮಡಿವಾಳನೆಂಬ ಎರಡು ತೋಳಧರಿಸಿದನ"

ಎನ್ನುತ್ತಾನೆ. ಆತ್ಮಜ್ಞಾನಿ ಅಲ್ಲಮದೇವರ ತೋಳಿನ ಈ ಸಂಕೇತ ಬಸವಣ್ಣ ಮಡಿವಾಳರಿಬ್ಬರ ಅಂತಃ ಸಾಮರ್ಥ್ಯ ಸೂತಕವಾಗಿದೆ. ಅಂತರಂಗ ಆತ್ಮಕ್ಕೆ ಆರೋಗಣೆ ಮಾಡಿಸುವ ಹಿರಿಮೆ ಆತನಿಗೆ ಸಿದ್ಧಿಸಿತ್ತು, ಅಂತಲೇ :

ಮಡಿವಾಳನ ಮಡಿಯ ಪ್ರಸಾದವ ನಾನು ಹೊದೆದ ಕಾರಣ
ನಿರ್ಮಳನಾದೆನು ನಿಜೈಕ್ಯನಾದೆನು ನಿಶ್ಚಿಂತನಾದೆನು
ಇದು ಕಾರಣ ಗುಹೇಶ್ವರ ಲಿಂಗದಲ್ಲಿ ತೆಜಹಿಲ್ಲದಿಪ್ಪ
ಮಡಿವಾಳನ ಪ್ರಸಾದದಿಂದ ನಿಮ್ಮ ಘನವನರಿದು
ಬದುಕಿದೆನು
ಕಾಣಾ ಸಂಗನ ಬಸವಣ್ಣ.

ಭಾವವನ್ನು ಗೆದ್ದು ನಿರ್ಭಾವದ ನಿಲುವಿಗೇರಿದ ಮಡಿವಾಳ ಮಾಚಿತಂದೆಯ ನಿರ್ಭಾವದ ಮಡಿಪ್ರಸಾದವನ್ನು ಅಲ್ಲಯ್ಯ ಅಕ್ಕರೆಯಿಂದ ಅಂಗೀಕರಿಸಿದ್ದಾನೆ. ಇಂಥ ಉದಾತ್ತ ಕಾಯಕ

ನಿರತನಿಂದ ಬಸವನ ಘನವನ್ನರಿತ ಪ್ರಭು ಮತ್ತೆ ಮಹಾಜ್ಞಾನ ಮಡಿವಾಳನ ಸಂಗದಿಂದ ತನ್ನ ಪೂರ್ವಾಪರಗಳನ್ನು ಅರಿತು

ಗುಹೇಶ್ವರನ ಶರಣ ಮಡಿವಾಳನ ಪಾದಕ್ಕೆ
ನಮೋ ನಮೋ ಎನುತಿರ್ದೆನು

ಎಂದು ಮುಕ್ತಕಂಠದಿಂದ ಹೊಗಳಿದ್ದಾನೆ, ಚೆನ್ನಬಸವಣ್ಣನಿಂದ ಮಡಿವಾಳನೆಂಬ ಪರುಷ ಸಾಧ್ಯಮಾಡಿಕೊಂಡ ಬಸವಣ್ಣ ಹೇಳುತ್ತಾನೆ.

"ಮಡಿವಾಳನೆಂಬರು ಮಡಿವಾಳನೆಂಬುದನಾರೂ ಅರಿಯರು. ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಮೈಲಿಗೆ ತನ್ನ ಪಾದದಲ್ಲಿ ಮೆಟ್ಟಿ ಅಲುಬಿ ಸೆಳೆದನಯ್ಯಾ ಅವನು ಕೊಟ್ಟ ನಿರ್ಮಲ ಬೀಳುಡಿಗೆಯನ್ನು ಹೊದೆದುಕೊಂಡೆನಾಗಿ ಮಡಿವಾಳ ಮಾಚಿತಂದೆಯ ಕೃಪೆಯಿಂದಲಾನು ಬದುಕಿದೆನಯ್ಯಾ ಕೂಡಲ ಸಂಗಮದೇವಾ"

ಬಟ್ಟೆಗಳನ್ನು ಮಡಿ ಮಾಡುವ ಆತನ ಕಾಯಕವನ್ನು ಸಾಂಕೇತಿಕವಾದ ಅರ್ಥದಲ್ಲಿ ನೋಡಿ ಆತನ ವ್ಯಕ್ತಿತ್ವಕ್ಕೆ ಕನ್ನಡಿಯನ್ನು ಹಿಡಿದಿದ್ದಾನೆ ಬಸವಣ್ಣ. ಹೊರಗಿನ ಕಾಯಕದೊಡನೆ ಆಧ್ಯಾತ್ಮಿಕ ಕಾಯಕ ಸಮನ್ವಯಗೊಂಡಿರುವ ಬಗೆ ಇಲ್ಲಿ ಸುಂದರವಾಗಿ ಮೂಡಿಬಂದಿದೆ. ಮಡಿವಾಳನ ಕೃಪೆಯಿಲ್ಲದೆ ನಿಜಲಿಂಗೈಕ್ಯವನರಿಯದ ಚೆನ್ನಬಸವ ಅವನ ಕೈಯ ಸ್ವಾಯತವಾಗಿ ಹೇಳುತ್ತಾನೆ.

ಭಕ್ತಿಯುಕ್ತಿಯನರಿಯೆ
ಷೋಡಶೋಪಚಾರಂಗಳನರಿಯೆ

ಭಾವನಿರ್ಭಾವವನರಿಯೆ
ಜ್ಞಾನಮಹಾಜ್ಞಾನವನರಿಯೆ ಕೂಡಲ ಚೆನ್ನಸಂಗಮ
ದೇವಯ್ಯಾ
ಮಡಿವಾಳ ತಂದೆಯ ಪಾದಕ್ಕೆ ನಮೋ ನಮೋ
ಎಂಬೆನು.

ಹೀಗೆ ಆತ ನಮಿಸುವುದರಿಂದ ಭಕ್ತಿ ಪೂಜೆ, ಜ್ಞಾನ, ಮಹಾ ಜ್ಞಾನ ನಿರ್ಭಾವ ಏನೆಲ್ಲವೂ ಲಭಿಸುವವಂತೆ! ಆತನ ಆ ಭಾವ ಪ್ರಸನ್ನತೆ, ಗುರುತ್ವಶಕ್ತಿ ಅಂತಹದು. ಇನ್ನೂ ಮುಂದುವರೆದ ಚೆನ್ನಬಸವಣ್ಣ ತನ್ನ ತನುಮನ ಭಾವ ಚೇತನಗಳನ್ನು ಪರಮ ಪ್ರಸಾದದಿಂದ ಬೆಳಗಿದ ಮಹಾಪ್ರಸಾದಿ ಮಾಚಿದೇವನಿಂದ ಅರಿವು ಕಂದೆರೆಯಿತೆಂದು ಹೇಳುತ್ತಾನೆ, ಇದರಿಂದಾಗಿ ಅವನಿಗೆ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲ ಅಳವಟ್ಟು ಭಾವ ನಿರ್ಭಾವವದಲ್ಲಿ ನಿಲ್ಲಿಸುವಂತಾಗಿತ್ತು ಎಂಬುದು ತಿಳಿದುಬರುತ್ತದೆ.

ಬಾಳಿನ ಮುನ್ನಡೆಗೆ ವಿಷವಾದ ಶಂಕೆಯನ್ನು ಕಳೆಯುವ ಗಾರುಡಿಗತನ, ಗುರುತ್ವ ಸಾಮರ್ಥ್ಯ ಮಾಚಿದೇವನಲ್ಲಿ ಕಂಡ ಸಿದ್ಧರಾಮಶಿವಯೋಗಿ ಅವನ ಪಾದಕ್ಕೆ ನಮೋ ನಮೋ ಎಂದು ಹೇಳಿ ಪರಮ ಸುಖಿಯಾದುದನ್ನು ತಿಳಿಸುತ್ತಾನೆ.

ಬೆಳಗು ಬೆಳಗು ಹಳಚುವಲ್ಲಿ
ಕತ್ತಲೆ ಉಳಿಯಬಲ್ಲುದೆ ಅಯ್ಯಾ ?
ಶರಣರು ಶರಣರು ಮಹಾನುಭಾವ ಗೋಷ್ಠಿಯ
ಮಾಡುವಲ್ಲಿ
ಸಂಗದೊಳಗಿದ್ದವರ ಅಜ್ಞಾನವಳಿದು ನಿಜವನೈದುವರಯ್ಯಾ

ನಿಮ್ಮ ಮಹಾನುಭಾವದ ಸೋಂಕಿನ ಸೆಜಗಿನೊಳಗಿದ್ದು
ನಾನು ಪರಮಸುಖಿಯಾಗಿ
ಮಡಿವಾಳನ ಪಾದದಲ್ಲಿ ಮಗ್ನನಾದೆನು
ಕಾಣಾ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನ.

ಇನ್ನು ಅಕ್ಕ ಮಹಾದೇವಿ 'ಮಡಿವಾಳ ಮಾಚಿತಂದೆಯಿಂದ ನಿರ್ಮಳ ಪ್ರಸಾದಕೊಂಡು ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದಳಂತೆ !' ಮರುಳು ಶಂಕರದೇವ 'ಎನ್ನ ಜೀವಾತ್ಮ ಚೇತನವಯ್ಯಾ ಮಡಿವಾಳ ಮಾಚಿತಂದೆಗಳು', ಎಂದರೆ ನುಲಿಯ ಚಂದಯ್ಯಾ 'ಎನ್ನ ದಾಸೋಹದ ನಿಷ್ಠೆಯೆ ಮಡಿವಾಳಯ್ಯನು' ಎಂದಿದ್ದಾನೆ. ಆದಯ್ಯ 'ಮಡಿವಾಳನೆನ್ನ ಮನ' ಎಂದು ಹೇಳಿ ತಾನು ಶರಣ ಪಡಿದೊತ್ತಯ್ಯ ಎನ್ನುತ್ತಾನೆ.

'ಮಾಹೇಶ್ವರಸ್ಥಲ ಮಡಿವಾಳಂಗಾಯಿತ್ತು
ಕಾಲಾಂತಕ ಭೀಮೇಶ್ವರ ಲಿಂಗವೇ'

ಎಂದು ಡಕ್ಕೆಯ ಬೊಮ್ಮಣ್ಣ ಷಟ್‌ಸ್ಥಲದಲ್ಲಿ ಮಾಚಿದೇವನಿಗೆ ಮಾಹೇಶ್ವರಸ್ಥಲ ಪ್ರಾಪ್ತವಾದುದನ್ನು ತಿಳಿಸಿದ್ದಾನೆ. ಆದರೆ ಲಿಂಗಸಾಹಿತ್ಯ ಮಡಿವಾಳ ಎನ್ನುವ ಚೆನ್ನಬಸವಣ್ಣ :

ನಾನೊಂದ ತೋಱಲಱಿಯೆನು ನಾನೊಂದ
ಹೇಳಲಱಿಯೆನು
ನಾನೊಂದ ಸ್ಥಳವಿಡಲರಿಯೆನು ನಾನೊಂದ
ಕುಳವಿಡಲಱಿಯೆನು
ಕೂಡಲ ಚೆನ್ನಸಂಗಮದೇವರಲ್ಲಿ
ಮಡಿವಾಳನ ನಿಲವ ನಾನೆತ್ತ ಬಲ್ಲೆನು ಹೇಳಾ
ಸಂಗನಬಸವಣ್ಣಾ

ನಿಜವಾಗಿ ಅವನಿಗೆ ಇಂತಹದೆ ಸ್ಥಳವೆಂದು ಹೇಳಲರಿಯೆನು ಎಂಬುದನ್ನು ಗಮನಿಸಿದರೆ ಅತ ಷಟ್‌ಸ್ಥಲ ಸಂಪನ್ನನಾಗಿರಬೇಕು ಅನ್ನಿಸುತ್ತದೆ. ಹೀಗೆ ಕಲ್ಯಾಣದ ಶರಣರೆಲ್ಲಾ ತಮ್ಮ ಮಧ್ಯ ಅವನನ್ನು ಮನತುಂಬಿ, ಕಣ್ತುಂಬಿ, ಭಕ್ತಿಭಾವತುಂಬಿ ಹಾಡಿ ಹೊಗಳಿದ್ದಾರೆ. ಆದರೆ ಮಾಚಿದೇವ ಮಾತ್ರ

'ಮಹಾಜ್ಞಾನಕ್ಕೆ ನಿರಹಂಕಾರವೆ ಶೃಂಗಾರ
ನಿರಹಂಕಾರಕ್ಕೆ ಭಕ್ತಿಯೆ ಶೃಂಗಾರ'

ಎಂದು ನಿರಹಂಕಾರದ ಸರ್ವಾರ್ಪಣೆಯಿಂದ ಎಲ್ಲರಿಗೂ ತನ್ನನ್ನು ನಿವೇದಿಸಿಕೊಂಡಿದ್ದಾನೆ. ಅವನ ಈ ಘನಗಂಭೀರ ವ್ಯಕ್ತಿತ್ವಕ್ಕೆ ತಲೆದೂಗಿದ ಶರಣರು ಅವನನ್ನು ತಂದೆಯೆಂದು ಪುರಸ್ಕರಿಸಿ ದ್ದಾರೆ. ಇಲ್ಲಿಯ ಶರಣರೆಲ್ಲಾ ಹಿರಿತನದ ಹಿರಿಯರಾಗಿದ್ದರೂ ಅವರಲ್ಲಿ ಹಿರಿಕಿರಿದು ಕಾಣುವುದಿಲ್ಲ. ಈ ಮಹಾನ್ ಆದರ್ಶ ಮಾಚಿದೇವನ ವಿಷಯದಲ್ಲಿ ಇನ್ನೂ ನಿಚ್ಚಳವಾಗಿ ತೋರಿದೆ.

೧೧. ಕೆಚ್ಚೆದೆಯ ಬಂಟ :

ಕಲ್ಯಾಣದಲ್ಲಿ ಶರಣರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಅವರು ಚರ್ಚೆ ಬೋಧನೆ, ಪ್ರತಿಪಾದನೆ, ಕಾಯಕಗಳಿಂದ ಮಾತ್ರ ತೃಪ್ತರಾಗಲಿಲ್ಲ. ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆ ಯನ್ನು ಅದರ ಎಲ್ಲ ಹಂತಗಳಲ್ಲಿಯೂ ದಿಟ್ಟತನದಿಂದ ಕಾರ್ಯ ಗತಗೊಳಿಸತೊಡಗಿದರು. ಇದು ಅಂದಿನ ಸಮಾಜ ವ್ಯವಸ್ಥೆ ಯಲ್ಲಿ ತುಂಬಾ ಕ್ರಾಂತಿಕಾರಕವಾಗಿ ಪರಿಣಮಿಸಿತು. ಸಂಪ್ರ ದಾಯವಾದಿಗಳು ಸಿಡಿದೆದ್ದರು. ಪ್ರಬಲವಾದ ಪ್ರತಿಭಟನೆ ಯನ್ನು ಶರಣರು ಎದುರಿಸಬೇಕಾಯಿತು. ಅದನ್ನು ಲೆಕ್ಕಿಸದ

ಅವರ ಕಾರ್ಯಕ್ಷೇತ್ರ ಅಸ್ಪೃಶ್ಯನಾಗಿದ್ದ ಹರಳಯ್ಯನ ಮಗನಿಗೂ ಬ್ರಾಹ್ಮಣನಾಗಿದ್ದ ಮಧುವರಸನ ಮಗಳಿಗೂ ಮದುವೆಯನ್ನು ಮಾಡಿಸುವ ಮಟ್ಟಕ್ಕೆ ಹೋದಾಗ ಅಂದಿನ ಸಮಾಜ ಅದನ್ನು ಅರಗಿಸಿಕೊಳ್ಳಲಿಲ್ಲ. ವರ್ಣಸಂಕರದಿಂದ ಧರ್ಮದ್ರೋಹ ವಾಯಿತೆಂದು ಹುಯಿಲೆದ್ದಿತು. ಧರ್ಮಸಂರಕ್ಷಣೆಯ ಸೋಗಿನಲ್ಲಿ ಹರಳಯ್ಯ ಮಧುವರಸರು ಬಿಜ್ಜಳನಿಂದ ಪ್ರಾಣಾಂತಿಕ ಉಗ್ರಶಿಕ್ಷೆ ಅನುಭವಿಸಿದರು. ಕಲ್ಯಾಣ ಜ್ವಾಲಾಮುಖಿಯಾಯಿತು. ಪರಿಸ್ಥಿತಿ ಶರಣರ ಕೈಮೀರಿಹೋಯಿತು. ಒಳಗೊಳಗೆ ಹೊಗೆಯಾಡುತ್ತಿರಬಹುದಾದ ರಾಜಕೀಯ ಶಕ್ತಿಗಳಿಗೆ ಇದರಿಂದ ಚಾಲನೆ ದೊರೆಯಿತು. ಈ ಅವಕಾಶವನ್ನುಪಯೋಗಿಸಿಕೊಂಡು ವಿರೋಧಿಗಳು ಬಿಜ್ಜಳನನ್ನು ಕೊಲೆಮಾಡಿ ಆ ಆರೋಪ ಶರಣರ ಮೇಲೆ ತಿರುಗಿಸಿದರು. ನಿಜವಾಗಿ ಈ ಸಂದರ್ಭದಲ್ಲಿ ಕಲ್ಯಾಣದಲ್ಲಿ ಏನು ನಡೆಯಿತೆಂಬುದು ಅಸ್ಪಷ್ಟವಾಗಿದೆ.

ಒಟ್ಟು ಶರಣರ ಮಹಾಸಾಹ ಮುಗಿದಿತ್ತು, ಕಲ್ಯಾಣದ ಕಾರ್ಯಕ್ಷೇತ್ರ ಕುಸಿಯಿತು. ೧೧೬೭ಕ್ಕೆ ಬಿಜ್ಜಳನ ಆಳ್ವಿಕೆ ಕೊನೆಗೊಳ್ಳುವುದರಿಂದ ಆತನ ಅಂತ ಆಗಲೇ ಆಗಿದೆಯೆಂಬುದು ಸ್ಪಷ್ಟ. ಹೀಗೆ ಕಲ್ಯಾಣದ ಕ್ರಾಂತಿ ವಿಪ್ಲವದಲ್ಲಿ ಕೊನೆಗೊಂಡಾಗ ಶರಣರೆಲ್ಲಾ ಈ ಮೊದಲು ಪ್ರಭುಕೊಟ್ಟ ನಿರ್ದೇಶನದಂತೆ ತಮ್ಮ ತಮ್ಮ ಲಕ್ಷ್ಯದೆಡೆಗೆ ನಡೆದರು. ಬಸವಣ್ಣನವರು ೬೭ ಸಾವಿರ ಜಂಗಮರನ್ನು ಚೆನ್ನಬಸವಣ್ಣನ ಕೈಗೊಪ್ಪಿಸಿ ಕಪ್ಪಡಿ ಸಂಗಮೇಶ್ವರನಲ್ಲಿ ಶಿವಸಾನಿಧ್ಯ ಪಡೆದರು. ಆ ಸುದ್ದಿ ತಿಳಿಯುತ್ತಲೆ ಶರಣರ ದುಃಖದ ಕಟ್ಟೆ ಒಡೆಯಿತು. ಮಾಚಿದೇವನಿ

ಗಂತೂ ಅತ ಶಿವನ ಅಪರಾವತಾರ. ಬಸವಣ್ಣನ ನೆನದಲ್ಲದೆ ಅವನಿಗೆ ಮುಕ್ತಿಯಿಲ್ಲ.

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ,
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ
ಆಯತವು ಸ್ವಾಯತವು ಸನ್ನಿಹಿತವು ಬಸವಣ್ಣನಿಂದ
ಇದ ಬಲ್ಲಿರೆ ನೀವು ಹೇಳಿಕೆ ಇತ್ತ ಬಲ್ಲಿರೆ ನೀವು ಹೇಳಿರೆ
ಬಸವ ಬಸವ ಎಂಬವರ ಭಕ್ತಿ ಶೂನ್ಯ ಕಾಣಾ
ಕಲಿದೇವರ ದೇವಾ

ಬಸವಣ್ಣನ ಪ್ರಭಾವ ದೇಶದ ತುಂಬ ಹರಡಿದ್ದನ್ನು ಭಾರ ಹೃದಯದ ಭಾವಪರವಶತೆಯಿಂದ ಭಕ್ತಿತುಂಬಿ ಹಾಡಿದ ಈ ಹಾಡು ಅಪಾರ ವೇದನೆಯನ್ನು ಪ್ರತಿಬಿಂಬಿಸುತ್ತದೆ.

ಕಟ್ಟಿದ ಮುಡಿಯು ಬಿಟ್ಟು ಹೋದೆಯಲ್ಲಾ ಬಸವಣ್ಣಾ
ಸೀಮೆ ಸಂಬಂಧ ತಪ್ಪಿಸಿ ಹೋದೆಯಲ್ಲಾ ಬಸವಣ್ಣಾ
ಲಿಂಗಕ್ಕೆ ಮಾಡಿ ಸೋಂಕದೆ ಹೋದೆಯಲ್ಲಾ ಬಸವಣ್ಣಾ
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣಾ

ಎನ್ನುವ ದುಃಖ ಮೇರೆ ಮೀರಿ.

ನಿಶಃಬ್ದವೇದ್ಯವಾದೆಯಲ್ಲಾ ಬಸವಣ್ಣಾ
ಕಲಿದೇವರ ದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣಾ !

ಎಂಬ ಪರಮಾವಧಿಯಲ್ಲಿ ಕೊನೆಗೊಂಡಿತು. ಮಿಂಚಿನ ವೇಗದಲ್ಲಿ ಘಟನೆಗಳು ನಡೆದುಹೋದವು. ಕಲ್ಯಾಣದ ಋಣ

ತೀರಿತ್ತು. ಮಡಿವಾಳಯ್ಯ ಮೊದಲಾದ ಶರಣರು ಉಳವೆಯ ಕಡೆ ನಡೆದರು. ಬಿಜ್ಜಳನ ಸೇನೆ ಬೆಂಬತ್ತಿತ್ತು, ಅದನ್ನು ಎದುರಿಸುತ್ತಾ ತೊರಗಲ್ಲು ನಾಡನ್ನು ಪ್ರವೇಶಿಸಿದ ಶರಣರು ತಡಗೋಡ, ಗೊಡಚಿ, ಕಾದರೊಳ್ಳಿ, ಮುರಗೋಡ ಮಾರ್ಗವಾಗಿ ಉಳುವಿ ಸೇರಿದರು. ಪುರಾಣಕಾವ್ಯ ಹಾಗೂ ಕಾಲಜ್ಞಾನ ನಿರೂಪಗಳಿಗೆ ಸಾಕ್ಷಿಯಾಗಿ ಈ ಭಾಗದ ಅನೇಕ ಐತಿಹಾಸಿಕ ಕುರುಹುಗಳು ಶರಣರು ಈ ಮಾರ್ಗದಲ್ಲಿ ಹಾದುಹೋಗಿದ್ದಕ್ಕೆ ಪುಷ್ಟಿಯಯನ್ನೊದಗಿಸುತ್ತವೆ. ಇಲ್ಲೆಲ್ಲ ಶರಣರು ಮತ್ತು ಶರಣಸಾಹಿತ್ಯವನ್ನು ರಕ್ಷಿಸುವ ಭಾರ ಮಾಚಿದೇವನ ಪಾಲಿಗೆ ಬಿತ್ತು.

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಜೈನರನು । ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ
ತಂಡ ಜಂಗಮದಂಡು ದಂಡನಾಯಕ ಮಾಚ
ಕಂಡಕಂಡಲ್ಲಿ ವೈರಿಗಳ । ಚೆಲ್ಲಿದರು
ಚೆಂಡು ಕಳಕೊಂಡ ಮರಿ ಅರಸ.

ಎಲ್ಲವನ್ನೂ ಕಾಲರುದ್ರನ ಹಾಗೆ ಖಂಡಿಸಿ ಶರಣರಿಗೆ ಕ್ಷೇಮರಕ್ಷೆ ಒದಗಿಸಿದ ಕೀರ್ತಿ ಮಾಚಯ್ಯನಿಗೆ ಸಲ್ಲುತ್ತದೆ.

೧೨. ಐಕ್ಯ :

ಮಾಚಿದೇವ ಐಕ್ಯವಾದ ಸ್ಥಳದ ಬಗ್ಗೆ ನಿಶ್ಚಿತ ಅಭಿಪ್ರಾಯವಿಲ್ಲ. ಚೆನ್ನಬಸವಪುರಾಣ ಮತ್ತು ಜಾನಪದ ನಂಬುಗೆ ಆತ ಹಿಪ್ಪರಿಗೆಯಲ್ಲಿಯೇ ಐಕ್ಯ ಹೊಂದಿದನೆಂದು ತಿಳಿಸಿದರೆ ಶ್ರೀ ಜಚನಿ ಅವರು ಕಾರಿಮನೆ ಆತನ ಐಕ್ಯಸ್ಥಳವೆನ್ನುತ್ತಾರೆ. ಆದರೆ

ಡಾ. ಆರ್. ಸಿ. ಹಿರೇಮಠರು ಆತ ಗೊಡಚಿಯಲ್ಲಿ ಐಕ್ಯವಾಗಿರುವ ಸಂಭವವಿದೆ ಎಂದಿದ್ದಾರೆ. ಬಿಜ್ಜಳನ ರಾಜ್ಯದ ಹೊರವೊಲೆಯುವಲ್ಲಿದ್ದಿರಬಹುದಾದ ತೊರಗಲ್ಲು ತಡಗೋಡ. ಗೊಡಚಿಯಲ್ಲಿ ಭಾರಿ ಯುದ್ಧವಾದಂತೆ ತೋರುತ್ತದೆ.

ಬೆನ್ನಹತ್ತಿದ ವೈರಿ ತಣ್ಣಗಾಯಿತು ಚೆದರಿ
ಮಣ್ಣಗೂಡಿಸಿದ ಮಾಚಯ್ಯ । ಕೈಯೆತ್ತಿ
ಚಿನ್ನ ವುಳಿಸಿದನು ಲಿಂಗಿಗಳ

ಆದರೆ ಮಾಚಿದೇವನನ್ನು ಉಳಿಸಿಕೊಳ್ಳಲಾಗಲಿಲ್ಲ.

ಹರಭಕ್ತರ ಮಹಿಮೆ ಮರಣದಲಿ ನೋಡೆಂದ
ಕರುಣೆಯಲಿ ಕಾಣೊ ಗುರುಭಕ್ತಿ । ಮಾಚನಿಗೆ
ಹರಸುತಲಿ ಹಾಡಿ ಶಿವಲೋಕ.

ಮಾಚಿದೇವ ಆ ಕಾಳಗದಲ್ಲಿ ಅಜೇಯವೀರನಾಗಿ ಮಡಿದಿದ್ದಾನೆ. ಪುರಾತನರು ನಿರೂಪಿಸಿದ ಕಾಲಜ್ಞಾನ ವಚನವೊಂದರಲ್ಲಿ 'ಗೊಡಚಿಯ ಗಿಡದ ಹುತ್ತಿನಲ್ಲಿ ಚಿಕ್ಕಗುಡಿಯ ಕಟ್ಟಿ ಅಲ್ಲಿ ಮಡಿವಾಳಯ್ಯಗಳ ಇಟ್ಟರು'. ಎಂಬ ಮಾತು ಈ ವಿಷಯವನ್ನು ಪುಷ್ಟೀಕರಿಸುತ್ತದೆ. ಟೊಂಕಕ್ಕೆ ಕಾಸಿಯನ್ನು ಕಟ್ಟಿ ಜಂಬೆಯನ್ನಿಟ್ಟು, ಇಷ್ಟಲಿಂಗ ಭಸ್ಮ ರುದ್ರಾಕ್ಷಿಗಳನ್ನು ಧಾರಣಮಾಡಿ ಮುದಿವೀರಭದ್ರನೆಂದು ಪ್ರಸಿದ್ಧಿ ಪಡೆದು ಪೂಜಿಸಿಕೊಳ್ಳುವ ಈ ವಿಗ್ರಹ ನಿಸ್ಸಂದೇಹವಾಗಿ ಒಬ್ಬ ಶರಣನದು ಎನ್ನುತ್ತಾರೆ ಡಾ. ಆರ್. ಸಿ. ಹಿರೇಮಠರು, ಆ ಶರಣ ಮಾಚಿದೇವ ಎಂದು ಹೇಳುವಲ್ಲಿ ಯಾವ ಸಂದೇಹವೂ ಇಲ್ಲ.

ಹೂವಿನಾ ಮಳೆಗರೆದು ಹೂವಿನ ರಾಶಾಗಿ
ದೇವಹಿಪ್ಪರಗಿ ಹೆಸರಾಗಿ । ಸಗ್ಗದಲಿ
ಹೂವಾದ ಮಾಚ ಶಿವಪದಕೆ

ನಮ್ಮಿಂದ ಆತ ದೂರವಾಗಿ ೮೦೦ ವರ್ಷಗಳು ಕಳೆದು ಹೋಗಿದ್ದರೂ ಆತ ಮತ್ತೆ ಬರುತ್ತಾನೆ ನಮಗೆ ಹಾದಿ ತೋರುತ್ತಾನೆ ಅನ್ನುವ ನಂಬುಗೆ ನಮ್ಮ ಜನರಲ್ಲಿ ಮನೆಮಾಡಿಕೊಂಡಿದೆ.

ಹೊನ್ನಿಯ ಮಳದಂಗ ಮುನ್ನೂರ ದೀವಟಿಗಿ
ಹೊನ್ನ ಹಿಪ್ಪರಗಿ ಬೈಯಲಾಗ । ಮಾಚಯ್ಯ
ಬನ್ನಿಯ ಮುಡದು ಬರತಾನೊ

೩. ಉಪಸಂಹಾರ:

ಕೊನೆಯಲ್ಲಿ ಮಾಚದೇವನ ಜೀವನದುದ್ದಕ್ಕೂ ದೃಷ್ಟಿ ಹರಿಸಿದರೆ ಅವನ ವೀರನಿಷ್ಠೆಯಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಅದು ಅವನ ವ್ಯಕ್ತಿತ್ವದ ಕೇಂದ್ರಬಿಂದು. ಆತನ ಕಾಯಕ ಬಟ್ಟೆಗಳನ್ನು ತೊಳೆಯುವುದು ಮಾತ್ರ ಆಗಿರಲಿಲ್ಲ. ಜನಮನದ ಮೈಲಿಗೆಯನ್ನು ತೊಳೆಯುವ ಮಡಿವಾಳನಾತ. 'ಸಮತೆಯೆಂಬ ನೀರಿನಲ್ಲಿ ತನುವನ್ನು ಅದ್ದಿ ಪಂಚೇಂದ್ರಿಯಗಳ ಅವಗುಣಗಳೆಂಬ ಕೊಳೆಯನ್ನು ಜ್ಞಾನ ಜಲದಲ್ಲಿ ಸೆಳೆದು ಕಳೆಯಬಲ್ಲವನು' ಎಂದು ಬಸವಣ್ಣ ಒಂದೆಡೆ ಹೇಳಿದ್ದಾನೆ.

ಮಾಚಿ ತಂದೆಯ ಮಡಿಯ ಹೊದ್ದದ ಶರಣನಿಲ್ಲ, ಜಂಗಮನಿಲ್ಲ. ಅಂತೆಯೇ ಆತನ ನಿರ್ಮಲ ಪ್ರಸಾದದಿಂದ ಪರಿಣಾಮಗೊಳ್ಳದ ಪ್ರಮಥರಿಲ್ಲ. ಶಿವಶರಣರ ತನುಮನ

ಗಳ ಪರಿವರ್ತನೆಯಲ್ಲಿ ಅವನದು ಎತ್ತಿದ ಕೈ. ಅತ ಬರೀ ವ್ಯಕ್ತಿಯಾಗಿರಲಿಲ್ಲ ಶಕ್ತಿಯಾಗಿದ್ದ. ಮಡಿವಾಳನ ಮಣಿಪದ ಎಲ್ಲ ಮುಖಗಳನ್ನು ಕಣ್ಣುಮುಂದೆ ತಂದರೆ ಆತನ ಅದ್ಭುತ ಶಕ್ತಿ, ಅಖಂಡ ಸಾಧನೆಗೆ ಬೆರಗಾಗುತ್ತೇವೆ. ಶರಣರಿಗಾಗಿ ಮಡಿದ ಆ ಜೀವ ಅಸಮಸಾಹಸ ನಿಸ್ವಾರ್ಥ ಸೇವೆ, ಅಷ್ಟೇ ಸರಳತೆಯನ್ನು ರೂಢಿಸಿಕೊಂಡಿತ್ತು. ಕಾಯಕದಲ್ಲಿಯೇ ತನ್ನ ವ್ಯಕ್ತಿತ್ವ ರೂಪಿಸಿಕೊಂಡ ಮಾಚಿದೇವ ಪ್ರಭು ಬಸವ, ಚೆನ್ನಬಸವ ಮೊದಲಾದ ಶರಣರಿಂದ ತಂದೆಯೆನಿಸಿಕೊಂಡು ಬಾಳಿದ ಹಿನ್ನೆಲೆ ಯನ್ನು ಗಮನಿಸಿದರೆ ಅವನ ಬದುಕಿನ ಪಾತ್ರದ ಅರಿವಾಗುತ್ತದೆ. ಸಾಮಾನ್ಯ ವರ್ಗದ ಒಬ್ಬ ಸಾಧಕ ಸಾಧಿಸಿರುವ ಈ ನಿಲುವು ಅಂದಿನ ಧಾರ್ಮಿಕ ಜಾಗೃತಿಯ ಪೂರ್ಣಯಶಸ್ಸಿಗೆ ಸಾಕ್ಷಿ ಯನ್ನೊದಗಿಸುತ್ತದೆ. ಇಂಥ ಯಶಸ್ಸು ಸಾಮೂಹಿಕವಾಗಿ ಆ ಕಾಲದಲ್ಲಿ ನಡೆದದ್ದು ಜಾಗತಿಕ ಇತಿಹಾಸದಲ್ಲಿಯೇ ಅಪರೂಪ.

ತನ್ನ ಕಾಯಕವನ್ನು ಶಿವಾರ್ಪಿತವನ್ನಾಗಿ ಮಾಡಿ 'ಅಂಗದ ಆಚಾರದಲ್ಲಿ ಸಂಗನಬಸವಣ್ಣನನ್ನು ಮನದ ಅರಿವಿನಲ್ಲಿ ಚೆನ್ನ ಬಸವನನ್ನೂ ಭಾವದ ಕೊನೆಯಲ್ಲಿ ಅಲ್ಲಮಪ್ರಭುದೇವರನ್ನೂ' ಕಾಣುತ್ತ 'ತನುವಿನಲ್ಲಿ ಹೊರೆಯಿಲ್ಲದೆ ಮನದಲ್ಲಿ ವ್ಯಾಕುಲವಿಲ್ಲದೆ ಭಾವದಲ್ಲಿ ಬಯಕೆಯಿಲ್ಲದೆ ತಾನೇ ತಾನಾಗಿ ಶಿವನಲ್ಲಿ ಬೆರಸಿ ಬೇಕಾಗದೆ' ಇದ್ದವನು. ಸ್ವತಂತ್ರ ಶಕ್ತಿ ಸಾಮರ್ಥ್ಯಗಳಿಂದ ಮುಂದೆ ಬಂದು ವೃತ್ತಿಗೌರವವನ್ನು ಹೆಚ್ಚಿಸಿ ಕಾಯಕದಲ್ಲಿಯೇ ಶಿವನನ್ನು ಕಂಡ ಆತನ ಸಿದ್ಧಿ ಅಭೂತಪೂರ್ವವಾದುದು. ಅವನ ವೀರಘಂಟೆಯ ಓಂಕಾರನಾದ ಎಲ್ಲರನ್ನು ತಟ್ಟಿತು, ಎಚ್ಚರಿಸಿತು, ಶಿವಪಥದಲ್ಲಿ ಕೊಂಡೊಯ್ಯಿತು. ಅವನ ನಂತರವೂ ಅವನ

ಪ್ರಭಾವ ಬೆಳೆದುಕೊಂಡು ಬಂದಿರುವುದಕ್ಕೆ ಮಡಿವಾಳೇಶ್ವರ ಹೆಸರಿನಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿಗಳಲ್ಲಿ ಹಬ್ಬಿ ನಿಂತ ಸುಮಾರು ೭೦ ಪೀಠಗಳು, ೨-೩ ಶಾಸನಗಳೂ ಶಿಲ್ಪ ಗಳೂ ಸಾಕ್ಷಿಯಾಗಿವೆ. ಜನಮನದಲ್ಲಿ ಬೇರೂರಿದ ಆ ಮಹಾ ಮಹಿಮನಿಗೆ ಕವಿ ಚಾಮರಸ ಹೀಗೆ ಶರಣಾರ್ಥಿ ಸಲ್ಲಿಸಿದ್ದಾನೆ:

ಶರಣುವೊಕ್ಕ ಸಮಸ್ತರಂತಃ
ಕರಣದಲ್ಲಿಯನಾದಿ ಮಾಯಾಂ
ಬರದ ಮೈಲಿಗೆದೊಳೆದು ಭಕ್ತಿರಸಪ್ರವಾಹದಲಿ
ಶರಣ ಪದಪಿಗೆ ಸಲಿಸಿ ಪರಮೇ
ಶ್ವರನ ತೋರುವ ಸುಲಭಕರುಣಾ
ಶರಧಿ ಮಡಿವಳ ಮಾಚಿದೇವಯ್ಯಂಗೆ ಶರಣಾರ್ಥಿ

(ಪ್ರ.ಲೀ. ೧-೬)

೪. ಅನುಬಂಧ

ಶಾಸನ ಹಾಗೂ ಶಿಲ್ಪಗಳಲ್ಲಿ ಮಾಚಿದೇವ:

ಶಾಸನಗಳು ನೇರವಾಗಿ ವಿಷಯ ಪ್ರತಿಪಾದನೆ ಮಾಡು ವುದರಿಂದ ಚರಿತ್ರೆ ಬರೆಯುವಲ್ಲಿ ಅವುಗಳಿಗೆ ಪ್ರಮುಖಸ್ಥಾನ ಕೊಡಲಾಗಿದೆ. ಶಿವಶರಣರ ಚರಿತ್ರೆಯನ್ನು ಇಂಥ ಆಧಾರ ಗಳಿಂದ ನಿರ್ಣಯಿಸಲು ಮಾಡಿದ ಪ್ರಯತ್ನದ ಫಲ ಡಾ. ಎಂ. ಎಂ. ಕಲ್ಬುರ್ಗಿಯವರ ಶಾಸನಗಳಲ್ಲಿ ಶಿವಶರಣರು' ಈ ಗ್ರಂಥದಲ್ಲಿ ಮಾಚಿದೇವನಿಗೆ ಸಂಬಂಧಿಸಿದ ಎರಡು ಶಾಸನಗಳು ಉಲ್ಲೇಖಿಸಲ್ಪಟ್ಟಿವೆ.

೧ ಕಲ್ಯಾಣದ ತ್ರಿಪುರಾಂತಕ ಕೆರೆಯ ಸಮೀಪದಲ್ಲಿ ದೊರೆತ ಶಾಸನ ಕ್ರಿ. ಶ. ೧೧೯೦ಕ್ಕೆ ಸಂಬಂಧಪಟ್ಟಿದ್ದು: ಅದರ ಪಾಠ ಇಂತಿದೆ:

೧. ಸ್ವಸ್ತಿ [।*] ಶ್ರೀ ಮತು ತ್ರೈಳೋಕ್ಯಮ
೨. ಲ (ಲ್ಲ) ದೇವನ ಮಡಿವಳ ಬಸವ ಶ್ರೀ
೩. ತ್ರಿಪುರಾನ್ತಕ ದೇವರ ಮಡಿವಳ
೪. ಮಾಕೆಯಂಗೆ ಆಚ (ಚಂ) ದ್ರಾರ್ಕ್ಕ
೫. ವರಂ ಬಿಟ್ಟ ಶಾಸನ [॥*]

ಇಲ್ಲಿ ದಾನ ನೀಡಿದವ ತ್ರೈಲೋಕ್ಯಮಲ್ಲನ ಮಡಿವಾಳ ನಾದ ಬಸವ, ದಾನಪಡೆದವ ಮಡಿವಳ ಮಾಕೆಯ. ಈ ಮಡಿವಳ ಮಾಕೆಯ ಶರಣ ಮಡಿವಳ ಮಾಚಯ್ಯನೆಂದು ಡಿ. ಡಾ. ಪಿ. ಬಿ ದೇಸಾಯಿ ಅವರ ಅಭಿಪ್ರಾಯ. ಆದರೆ ದಾನಸ್ವೀಕಾರ ಶರಣ ಧರ್ಮಕ್ಕೆ ವಿರುದ್ಧವಾಗಿರುವ ಕಾರಣ ಈ ಶಿಲಾಶಾಸನದಲ್ಲಿ ಉಕ್ತನಾದವನು ಉಜ್ವಲ ಶಿವಶರಣನಾದ ಮಡಿವಾಳ ಮಾಚಿದೇವ ನೆನ್ನಲು ಅನುಮಾನ ಬರುತ್ತದೆ ಎನ್ನುತ್ತಾರೆ ಡಾ. ಎಂ. ಎಂ. ಕಲ್ಬುರ್ಗಿಯವರು.

೨. ಮಾಚಿದೇವನ ಸಂತಾನವೆಂದು ಅಭಿಮಾನಪಡುವ ಅಗಸರು ತೆಲುಗು ಭಾಷೆಯಲ್ಲಿ ಬರೆಸಿದ ತಾಮ್ರಪಟವೊಂದು ಕಾರಕಾನಹಳ್ಳಿಯಲ್ಲಿ ದೊರೆತಿದೆ. ಅದರಲ್ಲಿ "ಈಶ್ವರನ ಬೆವರಿ ನಿಂದ ಮಡಿವಳಯ್ಯನು ಜನಿಸಿದನು. ಕಲ್ಯಾಣಪಟ್ಟಣದ ಪಶ್ಚಿಮ ಭಾಗದಲ್ಲಿರುವ ಮಡಿವಳಯ್ಯನ ಮಠದಲ್ಲಿ ಈ ವಿಷಯ ವನ್ನು ಹೇಳುವ ಶಾಸನವಿಲ್ಲವೆನ್ನುವವರು ಕತ್ತೆಯ ಹೊಟ್ಟೆಯಲ್ಲಿ

ಹುಟ್ಟುವರು. ನಮ್ಮ ಹಕ್ಕು ಆಯುಗಳ ವಿಷಯದಲ್ಲಿ ಮಡಿವಳ ಯ್ಯನು ರೂಪಿಸಿದ ನಿರ್ಣಯಗಳನ್ನು ಸಮಸ್ತರು ನಡೆಸಿಕೊಡ ಬೇಕು" ಎಂದಿದೆ. ಇದರ ಕಾಲ ಕ್ರಿ. ಶ. ೧೭೦೦.

೨. ಮಾಚಿದೇವನಿಗೆ ಸಂಬಂಧಪಟ್ಟ ಮತ್ತೊಂದು ಶಾಸನವನ್ನು ದಿ. ಡಾ. ಆರ್. ಎನ್. ಗುರವ ಅವರು ಅವಿನ್ಮನ ಭಾವಿಯಲ್ಲಿ ಸಂಶೋಧಿಸಿದ್ದಾರೆ. ಮಾಚಿದೇವನ ವಿಗ್ರಹ ಹೊಂದಿದ ಈ ಅಪೂರ್ವ ಶಾಸನ ಸದ್ಯಕ್ಕೆ ಕರ್ನಾಟಕ ವಿಶ್ವವಿದ್ಯಾ ಲಯದ ಕನ್ನಡ ಅಧ್ಯಯನ ಪೀಠದಲ್ಲಿರಿಸಲಾಗಿದೆ. ಕ್ರಿ. ಶ. ೧೨೮೪ರಲ್ಲಿ ಹುಟ್ಟಿದ ಈ ಶಾಸನ ಪಾಠ ಇಂತಿದೆ.

೧. ತಾರಣ ಸಂವತ್ಸರದ ವೈಶಾಖ ಸು. ೧೫ ಆಲು ಅಂಮೆನಭಾ [ವಿ].
೨. ಯಲಿ ಮಡಿವಾಳರು ವೀ_ಮಡಿವಾಳ ಮಾಚಿ......
೩. [ಯಗ] ಪ್ರತಿಷ್ಠೆಯಂ [ಮಾಡಿ] ದರು [॥*] ಮಂಗ [ಳಮಹಾಶ್ರೀಶ್ರೀಶ್ರೀ].

ಇಲ್ಲಿಯ ಮಡಿವಾಳರು ವೀರಮಾಚಿದೇವರ ವಿಗ್ರಹ ಪ್ರತಿಷ್ಠಾಪಿಸಿದ ಅಭಿಮಾನ ಮೆಚ್ಚುವಂತಿದ್ದು. ಇಲ್ಲಿ ಆತ ಗತಿಸಿ ಶತಮಾನ ಉರುಳುವುದರೊಳಗಾಗಿ ದೇವಸ್ವರೂಪನಾಗಿ ಮೂರ್ತಿ ಗೊಂಡು ಪೂಜೆಗೊಂಡಿರುವುದು ಗಮನಾರ್ಹವಾದುದು. ಇಂಥದೇ ಶಾಸನವಿರದ ವಿಗ್ರಹ ಮುಳಗುಂದದಲ್ಲಿ ದೊರೆತಿರು ವುದಾಗಿ ತಿಳಿದುಬಂದಿದೆ. ಈ ಎರಡೂ ವಿಗ್ರಹಗಳಲ್ಲಿ "ಮಾಚಿ ದೇವನ ಜೊತೆಯಲ್ಲಿ ನಿಂತ ಆತನ ಸತಿಯ ಪ್ರತಿಕೃತಿ, ಆನೆ ಯನ್ನು ನೆಲಕ್ಕೆ ತುಳಿಯುತ್ತಿರುವ ಆತನ ಆಕೃತಿ" ಎದ್ದು

ತೋರುವ ಅಂಶಗಳು. ಮೇಲೆ ಬಿಟ್ಟ ಬಿಜ್ಜಳನ ಆನೆಯನ್ನು ಸದೆಬಡಿದ ಪವಾಡ ಕಥೆ ಇಲ್ಲಿ ಮೂರ್ತಿಗೊಂಡಿದೆ. ವೀರಾ ವೇಶದಿಂದ ಆನೆಯ ಸೊಂಡಿಲನ್ನು ಹಿಡಿದು ಅದರ ಹಿಂಗಾಲಿನ ಮೇಲೆ ತನ್ನ ಎಡಗಾಲನ್ನು ಊರಿ ಅದನ್ನು ನೆಲಕ್ಕೆ ಮೆಟ್ಟುವ ರೀತಿ ಅಮ್ಮಿನಭಾವಿ ವಿಗ್ರಹದಲ್ಲಿ ಚೆನ್ನಾಗಿ ಮೂಡಿಬಂದಿದೆ. ಆದರೆ ದುರ್ದೈವದಿಂದ ಈ ವಿಗ್ರಹದಲ್ಲಿ ಮಾಚಿದೇವನ ಮುಖ ಒಡೆದು ಹೋಗಿದೆ. ಇಂದು ಗೊಡಚಿಯಲ್ಲಿ ವೀರಭದ್ರನ ಹೆಸರಿನಿಂದ ಪೂಜೆಗೊಳ್ಳುತ್ತಿರುವ ವಿಗ್ರಹ ಮಾಚಿದೇವನ ದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಕಲ್ಯಾಣ ವಿಪ್ಲವದ ನಂತರ ಶರಣರಿಗೆ ಬೆನ್ನೆಲುಬಾಗಿ ಉಳಿವಿ ಮಾರ್ಗದಲ್ಲಿ ನಡೆಸಿದ ಅವನ ಮಹಿಮಾ ಪ್ರಭಾವ ಸುತ್ತಮುತ್ತಲ ಪ್ರದೇಶಗಳಲ್ಲಿ ವ್ಯಾಪಿಸಿದಂತೆ ತೋರುತ್ತದೆ. ಈ ಮಾರ್ಗದಲ್ಲಿ ಪರಿವೀಕ್ಷಣಾ ಕಾರ್ಯ ಮುಂದುವರಿದರೆ ಆತನ ಅನೇಕ ವಿಗ್ರಹಗಳು ಪತ್ತೆಯಾಗುವ ಸಂಭವವಿದೆ. ಈ ದಿಶೆ ಯಲ್ಲಿ ಹೆಚ್ಚಿನ ಸಂಶೋಧನೆಯು ಅಗತ್ಯವಿದೆ.

ಗ್ರಂಥ ಋಣ

೧. ಭೀಮಕವಿಯ ಬಸವಪುರಾಣ :- ಸಂ. ಆರ್. ಸಿ. ಹಿರೇಮಠ

೨. ಲಕ್ಕಣದಂಡೇಶನ ಶಿವತತ್ವಚಿಂತಾಮಣಿ :
—ಸಂ. ಎಚ್. ದೇವಿರಪ್ಪ

೩. ಚಾಮರಸನ ಪ್ರಭುಲಿಂಗಲೀಲೆ :
—ಸಂ. ಡಾ. ಎಂ. ಎಸ್. ಸುಂಕಾಪುರ

೪. ಸಿಂಗಿರಾಜಪುರಾಣ

೫. ಚೆನ್ನಪ್ಪ ಕವಿಯ ಶರಣಲೀಲಾಮೃತ :
—ಸಂ. ಶ್ರೀ ಶಿವಬಸವಸ್ವಾಮಿಗಳು

೬. ಷಡಕ್ಷರಿಯ ಬಸವರಾಜವಿಜಯ :
—ಸಂ. ಡಾ. ಆರ್. ಸಿ. ಹಿರೇಮಠ

೭. ನಿರುಪಮ ಜ್ಞಾನೈಕನಿಧಿ ಮಡಿವಳ ಮಾಚಿತಂದೆ :
—ಬಿ. ನಂಜುಂಡಯ್ಯ

೮. ರಜಕರತ್ನ ಮಾಚಿತಂದೆ : —ಶ್ರೀ ಜಚನಿ

೯. ಮಡಿವಾಳಯ್ಯನ ವಚನಗಳು : —ಸಂ. ಎಸ್. ಉಮಾಪತಿ

೧೦. ಶಾಸನಗಳಲ್ಲಿ ಶಿವಶರಣರು .—ಡಾ. ಎಂ. ಎಂ. ಕಲ್ಬುರ್ಗಿ

೧೧. ಮಡಿವಳ ಮಾಚಿದೇವನ ವಿಗ್ರಹಗಳು .
—ಕರ್ನಾಟಕ ಭಾರತಿ ೬-೪

೧೨. ಶೂನ್ಯಸಂಪಾದನೆಯ ಪರಾಮರ್ಶೆ
—ಸಂ. ಶಿ. ಭೂಸನೂರಮಠ

೧೩. ಸಂಪಾದನೆಯ ಸೊಂಪು .—ಡಾ. ಜಚನಿ

೧೪. ಕನ್ನಡ ಜಾನಪದ ಗೀತಗಳು .
—ಡಾ. ಬಿ. ಎಸ್. ಗದಗೀಮಠ

೧೫. ವಚನ ಸಾಹಿತ್ಯ .—ಡಾ. ಎಂ. ಚಿದಾನಂದಮೂರ್ತಿ

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

---

೧. ನಗೆಗಾರ ನಯಸೇನ

—ಎಂ. ಎಸ್. ಸುಂಕಾಪೂರ

೨. ಮೈಲಾರದೇವರು

—ಶ್ರೀನಿವಾಸ ರಿತ್ತಿ

೩. ವಚನಕಾರ ದೇವರ ದಾಸಿಮಯ್ಯ

—ಎಸ್. ಎಸ್. ಬಾಣದ

೪. ಕವಿ ಬ್ರಹ್ಮಶಿವ

—ಎಸ್. ಪಿ. ಪಾಟೀಲ

೫. ಶ್ರೀ ನಿಜಗುಣ ಶಿವಯೋಗಿಗಳ ಭಕ್ತಿ, ಜ್ಞಾನ, ವೈರಾಗ್ಯ

—ಪಿ. ಎಂ. ಸಿದ್ಧಯ್ಯ

೬. ಬಾಲಲೀಲಾ ಮಹಾಂತ ಶಿವಯೋಗಿ

—ಎಸ್. ಎಸ್. ಭೂಸರಡ್ಡಿ

೭. ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು

—ಎ. ಆರ್. ಪಾಟೀಲ

೮. ಡಕ್ಕೆಯ ಬೊಮ್ಮಣ್ಣ

—ಎಚ್. ಎಸ್. ಮುಕ್ತಾಯಕ್ಕ

೯. ಮಧುರಚೆನ್ನ (ಕವಿ ಕಾವ್ಯ ಪರಿಚಯ)

—ಬಿ.ಆರ್. ನರೇಗಲ್

೧೦. ಕೊಂಡಗುಳಿ ಕೇಶಿರಾಜ

—ಎಂ. ಎಂ. ಪಡಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩